# ನಾದನೂಪುರ ವಂಡಾರು

# Nadanoopura Vandaru

ಮುಖ್ಯಸ್ಥರು – ವಂಡಾರು ಗೋವಿಂದ
97418 47278
ಪ್ರಧಾನ ಸಂಪಾದಕರು – ಶುಭಾಶಯ
ಗೌರವ ಸಂಪಾದಕರು – ಅಜಿತ್ ಕಾರಂತ್
94496 86807

Nadanoopura Yakshothana Trust (NYT) (R.)
Vandaru, Marvi, Vandaru village and Post,
Brahmavara Taluk, Udupi District – 576223
Email : nadanoopuravandaru@gmail.com
Website – https://nyt.1ngo.in/



ಸಮಸ್ತ ಕನ್ನಡಿಗರಿಗೆ ಪತ್ರಿಕಾ ಬಳಗದಿಂದ ಕನ್ನಡ ರಾಜ್ಯೋತ್ಸವದ ಹಾರ್ದಿಕ ಶುಭಾಶಯಗಳು

ಪರಿವಿಡಿ

ಬೋರ್ಡ್ ರೂಮ್
ಸಂಪಾದಕೀಯ
ಕನ್ನಡ ಸಾಹಿತ್ಯಕ್ಕೆ ಯಕ್ಷಗಾನದ ಕೊಡುಗೆ
ರಾಜ್ಯೋತ್ಸವ ಪ್ರಶಸ್ತಿಗಾಗಿ ಲಾಬಿ ಮಾಡಬೇಕೆ??
ಮೋಹಕ ಸ್ತ್ರೀ ವೇಷಧಾರಿ ಅರಾಟೆ ಮಂಜುನಾಥ
ಧೀರ ಕಲೆಯೊಳಗೆ ಕೀರವಾಣಿಯರು – ಶ್ರೀಮತಿ ಟಿ.ಎನ್. ಜ್ಯೋತಿ ಕಳಸ
ಕಾಡುವ ಪಾತ್ರ – 1 ಸಿದ್ದಕಟ್ಟೆ ಸದಾಶಿವ ಶೆಟ್ಟಿ
2. ಅಜ್ರಿ ಗೋಪಾಲ ಗಾಣಿಗ
ನಮ್ಮ ಲೈಬ್ರರಿ – ಚಂದ್ರಹಾಸ
ಯಕ್ಷಗಾನ ರಾಜ್ಯ ಪ್ರಶಸ್ತಿ ವಿಜೇತರು – 2022

## ಬೋರ್ಡ್ ರೂಂ



ಗೋವಿಂದ ವಂಡಾರು

ನಾಡಿನ ಸಮಸ್ತ ಜನತೆಗೆ ಕನ್ನಡ ರಾಜ್ಯೋತ್ಸವದ ಶುಭಾಶಯಗಳು. ಯಕ್ಷಗಾನವು ಕನ್ನಡಮ್ಮನನ್ನು ಹೊತ್ತು ಮೆರೆಸುವ ಕಲೆ ಎಂದರೆ ತಪ್ಪಿಲ್ಲ. ಸಮೃದ್ಧ ಸಾಹಿತ್ಯ ಭಂಡಾರವನ್ನು ಗರ್ಭೀಕರಿಸಿಕೊಂಡಿರುವ ಯಕ್ಷಗಾನ ಕನ್ನಡ ಮಣ್ಣಿನಲ್ಲಿ ವೈಭವದಿಂದ ಮೆರೆಯುತ್ತಿರುವ ಕಲೆ. ಆದರೆ ಕಳೆದರಡು ಮೂರು ವರ್ಷಗಳಲ್ಲಿ ಕೊರೊನಾ ಕರಿಛಾಯೆ ಯಕ್ಷಗಾನವನ್ನು ಆತಂಕವಾಗಿ ಕಾಡಿತ್ತು. ಇನ್ನೇನು ಯಕ್ಷಗಾನದ ಭವಿಷ್ಯ ಮುಗಿದೇ ಹೋಯಿತು ಎನ್ನುವಷ್ಟರಲ್ಲಿ ಕಳೆದೆರಡು ವರ್ಷಗಳಲ್ಲಿ ನಿರೀಕ್ಷೆಯನ್ನೂ ಮೀರಿ ಫೀನಿಕ್ಸ್ ಪಕ್ಷಿಯಂತೆ ಅತೀವೇಗದಲ್ಲಿ ಚೇತರಿಸಿಕೊಂಡ ಕಲೆ ಯಕ್ಷಗಾನ ಎನ್ನುವುದು ಸತ್ಯ. ಅದಕ್ಕೆ ಸಾಕ್ಷಿ ಎಂಬಂತೆ ಮೇಳದ ತಿರುಗಾಟಗಳು ನಿಂತ ಬಳಿಕ ಈ ಮಳೆಗಾಲದ ಅವಧಿಯಲ್ಲಿ ಯಾವುದೇ ಕಲಾವಿದರು ಕೆಲಸವಿಲ್ಲದೆ ಖಾಲಿ ಕೂತ ದಿನಗಳೇ ಅಪರೂಪವಾಗಿತ್ತು. ಒಂದಿಬ್ಬರು ಸಹವರ್ತಿಗಳೇ ಹೇಳಿದ ಹಾಗೆ ನಾಟಕ ಹಾಗೂ ಇತರ ರಂಗಭೂಮಿ ಪ್ರದರ್ಶನಗಳಿಗಿಂತ ಈ ಬಾರಿ ಹೆಚ್ಚಿನ ಬೇಡಿಕೆ ಇದ್ದದ್ದು ಯಕ್ಷಗಾನ ಪ್ರದರ್ಶನಕ್ಕೆ. ಬೆಂಗಳೂರು ಮುಂಬೈ, ಹುಬ್ಬಳ್ಳಿ ಧಾರವಾಡ, ಮಂಗಳೂರು, ಉಡುಪಿ ಕುಂದಾಪುರ, ಸಾಗರ ಉತ್ತರ ಕನ್ನಡದ ವಿವಿಧ ಪ್ರದೇಶಗಳಲ್ಲಿ ಹೆಚ್ಚಿನ ಸಂಖ್ಯೆಯ ಯಕ್ಷಗಾನ ಪ್ರದರ್ಶನಗಳು ಆಯೋಜನೆಯಾಗಿವೆ. ಇದಕ್ಕೆ ಕಾರಣ ಯಕ್ಷಗಾನ ಕ್ಲಾಸ್ ಕಲೆಯಾಗಿಯೂ, ಮಾಸ್ ಕಲೆಯಾಗಿಯೂ ಎಲ್ಲಾ ವರ್ಗದ ಜನರನ್ನು ರಂಜಿಸುತ್ತಿರುವುದು. ಯಕ್ಷಗಾನವನ್ನು ಜನ ಅಪ್ಪಿಕೊಂಡಿರುವ ರೀತಿಯೂ, ಹೊಸ ಹೊಸ ಪ್ರಯೋಗಗಳಾಗುತ್ತಿರುವುದು ಎರಡೂ ಸ್ವಾಗತಾರ್ಹವೇ. ಇಂತಹ ಯಕ್ಷಗಾನ ಉತ್ತುಂಗ ಸ್ಥಿತಿಯಲ್ಲಿರುವಾಗ ಅಲ್ಲೋ ಇಲ್ಲೋ ನಡುವೆ ಕಳಪೆ ಮನರಂಜನೆಯೂ ವೈಭವೀಕರಿಸುತ್ತದೆ. ಅಪಸವ್ಯಗಳು ಸೇರಿಕೊಳ್ಳುತ್ತವೆ. ಇದು ಕಲೆಯ ದೃಷ್ಟಿಯಿಂದ ಅಪಾಯಕಾರಿ ಎನಿಸಿದರೂ ಯಕ್ಷಗಾನವೆಂಬ ಜಾನಪದ ಕಲೆಯಲ್ಲಿ ಅಪರಾಧ ಎಂದು ಬಿಂಬಿಸುವ ನಡೆ ಸರಿಯಲ್ಲವೆಂದು ನನ್ನ ಭಾವನೆ. ರಂಗದಲ್ಲಿ ಪ್ರದರ್ಶನಗಳಲ್ಲಿ ಕಲಾವಿದನಿಂದ ಏನಾದರೂ ರಂಗದ ತಪ್ಪುಗಳಾದರೆ ಅದು ಕ್ಷಮ್ಯವೇ. ಏಕೆಂದರೆ ಕಲಾವಿದನ ಹಿನ್ನಲೆ ಹೆಚ್ಚಿನ ಬಾರಿ ಹಳ್ಳಿ ಸೊಗಡಿನ ಜೀವನಾನುಭವದ ಜಾನಪದ ಸಂಸ್ಕೃತಿ ಆಗಿರುತ್ತದೆಯೇ ಹೊರತು ಗ್ರಾಮ್ಯ ಕಲಾವಿದ ಪಾಂಡಿತ್ಯವನ್ನು ಅರೆದು ಕುಡಿದುಕೊಂಡು ಬಂದಿರುವುದಿಲ್ಲ. ಕಲೆಯಲ್ಲೇ ತೊಡಗಿಸಿ ಪಳಗಿ ಅನುಭವದ ಮೂಲಕ ರಂಗಜ್ಞಾನ ಗಳಿಸುತ್ತಾನೆ. ಈ ನೆಲೆಗಟ್ಟಿನಲ್ಲಿ ಯಕ್ಷಗಾನದಲ್ಲಿ ಏನೇ ಅಪಸವ್ಯ ಅಸಂಬದ್ಧಗಳು ಅನಿಸಿದರೆ ಕಟು ಟೀಕೆ ಹರಿಯಬಿಡುವುದನ್ನು ತಪ್ಪಿಸಿ.. ಏಕೆಂದರೆ ಒಂದು ಕಾರ್ಯಕ್ರಮದ ಸಂಘಟನೆ ಹಾಗೂ ಸಂಯೋಜನೆಯ ಹಿಂದೆ, ಹೊಸ ಪ್ರಯೋಗ ಪ್ರಸಂಗಗಳ ನಿರ್ಮಾಣದ ಹಿಂದೆ ಅನೇಕ ಜನರ ಬೆವರಿರುತ್ತದೆ. ಅನೇಕ ಕಲಾವಿದರ ಹೊಟ್ಟೆ ಪಾಡಿರುತ್ತದೆ. ಕಟು ಟೀಕಾಕಾರರು ರಂಗದಲ್ಲಿ ಅವರಿಗೆ ಸರಿ ಕಾಣದ್ದನ್ನು ವೈಯುಕ್ತಿಕಾಗಿ ಬಂದು ಹೇಳಿ ಸರಿ ಮಾಡಿಸಬಹುದು. ಅದರೊಂದಿಗೆ ಕಲಾವಿದನೂ ತಪ್ಪನ್ನು ಸರಿ ಪಡಿಸಿಕೊಳ್ಳುವ ಮನೋಭಾವ ಬೆಳೆಸಿಕೊಳ್ಳಬೇಕಾದದು ಅನಿವಾರ್ಯ. ಎಲ್ಲಾ ಮೇಳಗಳ ಈ ವರ್ಷದ ತಿರುಗಾಟ ಸಂತೋಷದಾಯಕವಾಗಿರಲಿ ಎಂದು ಆಶಿಸ್ತೇನೆ. – ***ಗೋವಿಂದ ವಂಡಾರು***

***ನಾದನೂಪುರ ಟ್ರಸ್ಟ್ ನ ನವಂಬರ್ ತಿಂಗಳ ಕಾರ್ಯಕ್ರಮ:*** ದಿನಾಂಕ ***09–11–2022*** ರ ಬುಧವಾರದಂದು ಸಿಂಡ್ಸ್ ಮಂಗಳೂರು, ನಾದನೂಪುರ ಯಕ್ಷೋತ್ಥಾನ ಟ್ರಸ್ಟ್ ವಂಡಾರು ಜಂಟಿ ಆಯೋಜನೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಉಡುಪಿ ಜಿಲ್ಲೆಯ ಪ್ರಾಯೋಜಕತ್ವದಲ್ಲಿ ಹಾಗೂ ಯಕ್ಷಗಾನ ಕಲಾ ಕೇಂದ್ರ ಹಂಗಾರ ಕಟ್ಟೆ ಇವರ ಸಹಕಾರದೊಂದಿಗೆ ***ಚಿನ್ನದ ಅಳಿಲು (ಸ್ವರ್ಣ ಕಲಂದಕ)*** ಎಂಬ ಆಖ್ಯಾನದ ಪ್ರದರ್ಶನ ಸಂಜೆ 7 ಗಂಟೆಗೆ ***ಸದಾನಂದ ರಂಗಮಂಟಪ, ಗುಂಡ್ಮಿ, ಸಾಲಿಗ್ರಾಮದಲ್ಲಿ*** ನಡೆಯಲಿದೆ. ಕಲಾಭಿಮಾನಿಗಳಿಗೆ ಉಚಿತ ಪ್ರವೇಶವಿದೆ.

**ನಾದ ನೂಪುರ ಡಿಜಿಟಲ್ ಯಕ್ಷ ಪತ್ರಿಕಾ ಬಳಗ**

**ವಂಡಾರು ಗೋವಿಂದ | ಶುಭಾಶಯ | ಅಜಿತ್ ಕಾರಂತ್ | ಪ್ರೊ. ಉದಯ್ ಕುಮಾರ್ ಶೆಟ್ಟಿ | ರವಿ ಮಡೋಡಿ | ಎಂ ಶಾಂತಾರಾಮ್ ಕುಡ್ವ | ಸಾಯಿಸುಮ ಎಂ ನಾವಡ | ಉಮೇಶ್ ಶಿರೂರ್**

**ನ್ಯೂಸ್ ಲೆಟರ್ ವಿನ್ಯಾಸ – ಶುಭಾಶಯ**

**ಸಂಪಾದಕೀಯ**

***ಆತ್ಮೀಯರಿಗೆಲ್ಲಾ ಕನ್ನಡ ರಾಜ್ಯೋತ್ಸವ ಹಾಗೂ ಕಾರ್ತಿಕ ದೀಪೋತ್ಸವದ ಶುಭಾಶಯಗಳು.***



**ಅಜಿತ್ ಕಾರಂತ್**
**ಗೌರವ ಸಂಪಾದಕರು**

"ಕನ್ನಡ ಭಾಷೆಯನ್ನು ಉಳಿಸಿ, ಬೆಳೆಸುತ್ತಿರುವ ಏಕೈಕ ಕಲೆ ನಮ್ಮ ಯಕ್ಷಗಾನ"- ಇದನ್ನು ಹೆಮ್ಮೆಯಿಂದಲೂ, ಯಾವುದೇ ಸಂಶಯವಿಲ್ಲದೆಯೂ ಹೇಳಬಹುದು. ಇಂತಹಾ ಯಕ್ಷಗಾನದ ಅರ್ಥಗಾರಿಕೆ ಹೇಗಿರಬೇಕು? ಈ ಪ್ರಶ್ನೆ ಸಹಜವಾಗಿಯೇ ಮೂಡುತ್ತದೆ. ಬಹಳ ವಿಸ್ತಾರವಾದ ಅಧ್ಯಯನ ಹಾಗೂ ಚಿಂತನೆಗಳೊಂದಿಗೆ, ಪ್ರಸಂಗ ಪಠ್ಯಕ್ಕೆ ಅನುಗುಣವಾಗಿ ಕೇಳುಗರಿಗೆ ಹಿತಾನುಭವವನ್ನೂ,ವಿಷಯ ಮಂಡನೆಯನ್ನೂ, ಕಥಾ ನಿರೂಪಣೆಯನ್ನೂ, ರಸಾನುಭೂತಿಯನ್ನೂ ಏಕಕಾಲದಲ್ಲಿ ಉಂಟು ಮಾಡುವ ಮಾತುಗಾರಿಕೆ ಇದು! ಆಟ ಹಾಗೂ ಕೂಟಗಳಲ್ಲೆರಡರಲ್ಲೂ ಮಾತುಗಾರಿಕೆ ತನ್ನ ಸ್ಥಾನವನ್ನು ಎತ್ತರಿಸಿಕೊಂಡಿದೆ. ಕೂಟದಲ್ಲಂತೂ ಮಾತೇ ಮಹತ್ವವನ್ನು ಪಡೆದು, ನಿಜಾರ್ಥದಲ್ಲಿ "ಗೀರ್ವಾಣೀ* ಎನಿಸಿದೆ.

ಇಲ್ಲಿ ಅರ್ಥಗಾರಿಕೆ ಮಾಡುವಾಗ ಕೇವಲ ಸಭಾರಂಜನೆಯನ್ನು ಮಾತ್ರ ದೃಷ್ಟಿಯಲ್ಲಿಡದೇ, ದೀರ್ಘ ಮಾತುಗಳಾಡದೇ, ಹಿತಮಿತವಾದ ವಿತಂಡವಾದಗಳಿಲ್ಲದ ಮುಂದಿನ ಸನ್ನಿವೇಶಕ್ಕೆ ಪೂರಕವಾಗಬಲ್ಲ ಮಾತುಗಾರಿಗೆ ಶ್ರೇಷ್ಠವೆನಿಸಲ್ಪಡುತ್ತದೆ.

ಆದರೆ, ಇಂದು ಈ ಅರ್ಥಗಾರಿಕೆ ಅದೇ ಮಟ್ಟದಲ್ಲಿದೆಯೇ!? ಸಾಹಿತ್ಯಶುದ್ಧಿಯ ದೃಷ್ಟಿಯಿಂದ ನೋಡಿದಾಗ ಅನೇಕ ತಪ್ಪುಗಳು ಕಾಣಸಿಗುತ್ತವೆ. ಜೊತೆಗೆ ಪರಂಪರೆಯಿಂದ ಬಂದ ಅರ್ಥಗಾರಿಕೆ ಎನ್ನುವ ಕಾರಣದೊಂದಿಗೆ ಅದದೇ ಮಾತುಗಳು ಕೇಳಿಬರುತ್ತಿವೆ. ಹಾಸ್ಯದಲ್ಲಂತೂ ಅದಕ್ಕೆ ಅನ್ಯ ಕಲಾ ಪ್ರಕಾರಗಳ (ಉದಾ; ಸಿನಿಮಾ, ಧಾರಾವಾಹಿ) ಪ್ರಭಾವ ಆಗಿರುವುದು ಕಾಣಬಹುದು.

ಸಂವಾದ ಕಲೆ ಎಲ್ಲರಿಗೂ ಸಿದ್ಧಿಸದು. ಹಾಗಂತ ಅದರ ಪ್ರಯತ್ನವನ್ನಾದರೂ ಮಾಡಬೇಕು.
ಉದಾಹರಣೆಗಳನ್ನು ಗಮನಿಸಿ; ಸತಿ-ಪತಿಯರ ಸರಸ ಸಂವಾದವಾಗಬೇಕಾದಲ್ಲಿ ಸಂಘರ್ಷ ಏರ್ಪಡುವುದು! ಸುಧನ್ವ- ಪ್ರಭಾವತೀ, ರಾವಣ-ಮಂಡೋದರೀ, ವಾಲಿ-ತಾರೆ, ಸೀತಾಪಹಾರದ ರಾಮ-ಸೀತೆ ಪಾತ್ರಧಾರಿಗಳು ಮಾತಾಡುತ್ತಾ ವೈಯಕ್ತಿಕ ನೆಲೆಯಲ್ಲಿ ಸೋಲಬಾರದೂ ಎನ್ನುವ ಕಾರಣಕ್ಕೆ ಸಂವಾದವು ವಾದವಾಗಿ ಆ ವಾದವು ವಿವಾದವಾಗಿ ಮಾರ್ಪಡುವುದನ್ನು ಕಾಣುತ್ತೇವೆ. ಇಲ್ಲಿ ಪಾತ್ರಗಳ ಚಿತ್ರಣವಿರದೇ ಪಾತ್ರಧಾರಿಗಳ ಪ್ರತಿಷ್ಠೆಯೇ ದೊಡ್ಡದಾಗಿರುತ್ತದೆ. ಹೀಗಾಗಬಾರದು!

ಈ ಅರ್ಥಗಾರಿಕೆಗೆ ಅಭ್ಯಾಸ ಬೇಕೆ? ಎನ್ನುವ ಪ್ರಶ್ನೆಯೊಂದಿದೆ. ಹೌದು! ಅಭ್ಯಾಸ ಖಂಡಿತಾ ಬೇಕು. ಬೇರೆ ಕಲಾಪ್ರಕಾರಗಳನ್ನು ಗಮನಿಸಿ. ಅಭ್ಯಾಸ ಮಾಡಿಯೇ(ರಿಹರ್ಸಲ್) ಪ್ರದರ್ಶನ ಕೊಡುತ್ತಾರೆ. ಆದರೆ ನಮ್ಮಲ್ಲಿ!? ರಂಗಸ್ಥಳವೇ ಎಲ್ಲವೂ...ರಂಗಸ್ಥಳದಲ್ಲಿಯೇ ಎಲ್ಲವೂ....

ಇಂತಹಾ ದೋಷಗಳಿಂದ ಹೊರ ಬಂದು ಸುಂದರ ಪ್ರದರ್ಶನ ನೀಡುವಂತಾದರೆ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ನಮಗೊಂದು ಭದ್ರವಾದ ಸ್ಥಾನ ದೊರಕುವುದರಲ್ಲಿ ಸಂಶಯವಿಲ್ಲ. ಎಲ್ಲರೂ ಆ ನಿಟ್ಟಿನಲ್ಲಿ ಪ್ರಯತ್ನಿಸೋಣ.

ಅಹಂಕಾರ, ಸ್ವಾರ್ಥ, ಪ್ರತಿಷ್ಠೆ ಎನ್ನುವ ಕತ್ತಲು ದೂರವಾಗಿ ಸೌಮನಸ್ಯ, ಮೇಳ, ಉತ್ತಮ ಪ್ರದರ್ಶನ ತನ್ಮೂಲಕ ಸಮಾಜಕ್ಕೆ ಉತ್ತಮ ಸಂದೇಶವೆಂಬ ಬೆಳಕಿನ ದೀಪಾವಳೀ ಆಚರಿಸೋಣ. "ಸಿರಿಗನ್ನಡದೊಳ್ ಯಕ್ಷಗಾನಂ ಗೆಲ್ಗೆ, ಯಕ್ಷಗಾನಂ ಬಾಳ್ಗೆ".


## ಕನ್ನಡ ರಾಜ್ಯೋತ್ಸವ ವಿಶೇಷ ಲೇಖನ – ಕನ್ನಡ ಸಾಹಿತ್ಯಕ್ಕೆ ಯಕ್ಷಗಾನದ ಕೊಡುಗೆ

ದ್ರಾವಿಡ ಭಾಷೆಗಳಲ್ಲೇ ಅತ್ಯಂತ ಹಿರಿತನ ಹೊಂದಿರುವ ಕನ್ನಡಕ್ಕೆ, ಸುಮಾರು 2000 ವರುಷಗಳಷ್ಟು ಇತಿಹಾಸವಿದೆ. ಕನ್ನಡ ಸಾಹಿತ್ಯವನ್ನು ಜನಪದ, ವಚನ, ದಾಸ ಸಾಹಿತ್ಯ ಹೀಗೆ ಹಲವು ಪ್ರಕಾರಗಳಾಗಿ ವಿಂಗಡಿಸಬಹುದು. ಇಂಥ ಅನೇಕ ಪ್ರಕಾರಗಳಲ್ಲಿ ಬಹಳಷ್ಟು ಜನರಿಗೆ ತಿಳಿಯದೆ ಇರುವ ಮತ್ತೊಂದು ಸಾಹಿತ್ಯ ಪ್ರಕಾರವೇ ಅದು ಯಕ್ಷಗಾನ ಸಾಹಿತ್ಯ.


ಯಕ್ಷಗಾನವೆಂದರೆ ನಮಗೆ ನೆನಪಾಗುವುದು ಚಂಡೆ ಮದ್ದಲೆಗಳ ನಿನಾದ, ಭಾಗವತರ ಶ್ರುತಿಬದ್ಧ ಹಾಡುಗಾರಿಕೆ, ಬಣ್ಣಗಳಲ್ಲಿ ಮೂಡುವ ಪಾತ್ರಗಳು, ಆಕರ್ಷಕವೆನಿಸುವ ವೇಷಭೂಷಣ, ಮಾತುಗಾರಿಕೆಯ ಸೊಗಸು, ಮನೋಲ್ಲಾಸ ನೀಡುವ ಹೆಜ್ಜೆಗಾರಿಕೆ ಇತ್ಯಾದಿಗಳು. ಬೇರೆ ಯಾವುದೇ ಕಲೆಗಳಲ್ಲಿ ಇಂತಹ ಒಂದೆರಡು ಅಂಶಗಳು ಮಾತ್ರ ಕಾಣಿಸಿದರೆ ಯಕ್ಷಗಾನದಲ್ಲಿ ಮಾತ್ರ ಸಮಷ್ಟಿಯಾಗಿ ನಾಟ್ಯಶಾಸ್ತ್ರದ ಹಲವು ಅಂಶಗಳನ್ನು ಒಳಗೊಂಡ ಕಲೆಯಾಗಿ ರೂಪುಗೊಂಡಿದೆ. ಇದರ ಜೊತೆಗೆ ಗಮನಿಸಲೇಬೇಕಾದ ಮತ್ತೊಂದು ಅಂಶವೆಂದರೆ ಅದರ ಸಾಹಿತ್ಯ. ಇದು ಇಡೀ ರಂಗಭೂಮಿಯ ಮುಖ್ಯ ಜೀವಾಳವಾಗಿ ಪ್ರದರ್ಶನಕ್ಕೆ ಬೇಕಾದ ಪಠ್ಯವನ್ನು ಒದಗಿಸುತ್ತದೆ. ಮಾತ್ರವಲ್ಲದೇ ಪ್ರದರ್ಶನದ ಆಶಯಗಳನ್ನು ಸಾಹಿತ್ಯದಿಂದ ಸ್ಫುಟಗೊಳಿಸುತ್ತದೆ. ಮೇಲ್ನೋಟಕ್ಕೆ ಸಾಹಿತ್ಯವು ರಂಗಭೂಮಿಯ 'ಸಂಗೀತ ನಾಟಕ' ದಂತೆ ತೋರಿದರೂ ಕೂಡ ಗೇಯ ಕಾವ್ಯದ ಹಾಗೂ ಹಾಡುಗಬ್ಬದ ಲಕ್ಷಣಗಳನ್ನು ಹೊಂದಿದೆ. ಈ ಬಗ್ಗೆ ಸಾಹಿತ್ಯಾಸಕ್ತರು ಇದರ ಸಾಹಿತ್ಯದ ಸಾಧ್ಯತೆ, ಸೌಂದರ್ಯ ಹಾಗೂ ವಸ್ತುನಿಷ್ಠತೆಯನ್ನು ಅವಲೋಕಿಸಬೇಕಿದೆ.

ಯಕ್ಷಗಾನ ಪರಿಭಾಷೆಯಲ್ಲಿ ಯಕ್ಷಗಾನದ ಸಾಹಿತ್ಯವನ್ನು 'ಪದ/ಪದ್ಯ' ಅಥವಾ ಪದಗಳ/ಪದ್ಯಗಳ ಸಮೂಹವನ್ನು ಪ್ರಸಂಗ ಎಂಬುದಾಗಿಯೂ ಮತ್ತು ಕವಿಯನ್ನು ಪ್ರಸಂಗಕರ್ತ ಎಂಬುದಾಗಿ ಕರೆಯುತ್ತಾರೆ. ಪ್ರಸಂಗಕರ್ತನಿಗೆ ಕೇವಲ ಸಾಹಿತ್ಯದ ಪರಿಣಿತಿಯಿದ್ದರೆ ಸಾಲದು. ಅವನಿಗೆ ರಂಗ ಪ್ರಜ್ಞೆ, ರಾಗ-ತಾಳ, ಸ್ವರ, ಲಯ,ಇವುಗಳ ತಿಳುವಳಿಕೆ ಇದ್ದರೆ ಮಾತ್ರ ಒಂದು ಪರಿಣಾಮಕಾರಿಯಾದ ಪ್ರಸಂಗವನ್ನು ರಚಿಸುವುದಕ್ಕೆ ಸಾಧ್ಯವಾಗುತ್ತದೆ. ಕನ್ನಡದ ಶಬ್ದಗಳನ್ನು ಛಂದೋಬದ್ಧವಾಗಿ ಬಳಸಿ, ತಾಳಕ್ಕೆ ಸರಿಯಾಗಿ ಪೋಣಿಸಿ, ಅದು ವಿಶಾಲವಾದ ಅರ್ಥ ಮೂಡುವುಂತೆ ರಚಿಸಿದಾಗ ಅದು ಪದವಾಗುತ್ತದೆ ಅಥವಾ ಪದ್ಯವಾಗುತ್ತದೆ. ಇಂಥ ಪದ್ಯಗಳು ರಂಗಪ್ರಯೋಗದಲ್ಲಿ ಸನ್ನಿವೇಶಕ್ಕೆ ತಕ್ಕಂತೆ ಭಾಗವತರು ಹಾಡಿ, ಭಾವವನ್ನು ತುಂಬಿ ಕರುಣ, ಶೃಂಗಾರ, ಭಯ ಇತ್ಯಾದಿ ನವರಸಗಳು ಮೂಡುವಂತೆ ಸಾಹಿತ್ಯ ರಚನೆಯಾಗಿರುತ್ತದೆ. ಇಂಥ ಕ್ಲಿಷ್ಟ ಮತ್ತು ಅಭೂತವಾದ ಸಾಹಿತ್ಯವು, ಪ್ರಸಂಗಗಳ ಮೂಲಕ ರಂಗದಲ್ಲಿ ಅಭಿವ್ಯಕ್ತಗೊಳ್ಳುತ್ತದೆ. ಯಕ್ಷಗಾನ ರಂಗಭೂಮಿಗೆ ಮುಖ್ಯ ಭಾಗವಾಗಿ ಇದು ಜೀವಾಳವಾಗಿರುತ್ತದೆ. ಕೇವಲ ಸಾಹಿತ್ಯ ಮಾತ್ರವಲ್ಲದೇ ಇಡೀ ಯಕ್ಷಗಾನ ರಂಗಭೂಮಿಗೆ, ನಿರ್ದೇಶನವು ಇದರ ಸಾಹಿತ್ಯದಿಂದಲೇ ಸಿಗುತ್ತದೆ. ಮೇಲ್ನೋಟಕ್ಕೆ ಇದು ರಂಗಭೂಮಿಯ 'ಸಂಗೀತ ನಾಟಕ' ದಂತೆ ತೋರಿದರೂ, ಇದು ಗೇಯ ಕಾವ್ಯದ

ಲಕ್ಷಣಗಳನ್ನು ಒಳಗೊಂಡಿದೆ. ಯಕ್ಷಗಾನ ಪ್ರಸಂಗ ಸಾಹಿತ್ಯ ವಿಪುಲ ಮತ್ತು ಶ್ರೀಮಂತ ಸಾಹಿತ್ಯವಾಗಿದ್ದು ಹಾಡಿನ ರೂಪದಲ್ಲಿ ಜನಸಾಮಾನ್ಯರನ್ನು ಪೌರಾಣಿಕ ಕಥೆಗಳ ಮೂಲಕ ತಲುಪುವ ಮಾಧ್ಯಮವಾಗಿ ಹಲವು ಶತಮಾನಗಳಿಂದ ನಡೆದುಬಂದಿದೆ. ಆಧುನೀಕತೆ ಮತ್ತು ತಂತ್ರಜ್ಞಾನದ ಬೆಳಕನ್ನೇ ಕಾಣದ ಕಾಲದಲ್ಲಿ ಯಕ್ಷಗಾನದ ಆಟಗಳು ಹಳ್ಳಿಹಳ್ಳಿಗಳನ್ನು ಕನ್ನಡ ಸಾಹಿತ್ಯದ ಮೂಲಕವಾಗಿ ತಲುಪಿ ಜನಮಾನಸದಲ್ಲಿ ಮನೋರಂಜನೆಯ ಜೊತೆಗೆ ಪುರಾಣ – ಕಥೆಗಳ ಜ್ಞಾನದ ಬೆಳಕನ್ನು ಹಚ್ಚಿದ್ದು ಸತ್ಯವಷ್ಟೇ. ಇದಕ್ಕೆ ಪ್ರಮುಖ ಕಾರಣ ಯಕ್ಷಸಾಹಿತ್ಯದಲ್ಲಿನ ಶ್ರೀಮಂತಿಕೆ ಮತ್ತು ಅನಕ್ಷರಸ್ಥರ ನೆನಪಿನಲ್ಲೂ ಉಳಿಯುವಂಥಹ ಸರಳ ಕನ್ನಡ ಸಾಹಿತ್ಯ.




ಸಾಹಿತ್ಯವೆಂದರೆ ಕೇವಲ ಅದು ಪದಗಳ ಸಮೂಹವಲ್ಲ. ಭಾಷೆಯನ್ನು, ಭಾವನೆಗಳನ್ನು , ಸೃಜನಶೀಲತೆಯನ್ನು, ಪಾಂಡಿತ್ಯವನ್ನು ಕೊಡುವ ಪ್ರಬಲ ಮಾಧ್ಯಮವೆಂದು ಕರೆಯಬಹುದಾಗಿದೆ. ಹಾಗಾದರೆ ಈ ಲಕ್ಷಣಗಳು ಯಕ್ಷಗಾನ ಸಾಹಿತ್ಯದಲ್ಲಿ ಇದೆಯೇ ಎಂದು ಕೇಳಿದರೆ ಇದೆ ಎಂದು ಖಚಿತವಾಗಿ ಹೇಳಬಹುದಾಗಿದೆ. ಸಾಹಿತ್ಯ ಎನ್ನುವುದಕ್ಕೆ ಸಮಾಜದ ಪ್ರತಿಬಿಂಬ ಎನ್ನುವ ಅರ್ಥವಿದೆ. ಅದು ಸಮಾಜದ ಓರೆಕೋರೆಗಳನ್ನು ಒರೆಗೆ ಹಚ್ಚಿ ಅದರ ಹಿತವನ್ನು ಕಾಯುವುದು ಅದರ ಆಶಯಗಳಲ್ಲಿ ಒಂದಾಗಿದೆ. ವಸ್ತುನಿಷ್ಠತೆಯನ್ನು, ವಾಸ್ತವತೆಯನ್ನು ದೃಶ್ಯೀಕರಿಸುವ ಹಾಗೂ ಸದೃಢ ಸಮಾಜವನ್ನು ರೂಪಿಸುವ ಸಾಧನವಾಗಿದೆ. ಹಾಗೇ ನೋಡಿದರೆ ಯಕ್ಷಗಾನದ ಉದ್ದೇಶ ಕೂಡ ಇದೆ ಎಂದರೆ ತಪ್ಪಾಗಲಾರದು. ಇಲ್ಲಿ ಸಾಹಿತ್ಯವು ಎರಡು ವಿಭಾಗದಲ್ಲಿ ಹರವಿಕೊಂಡಿದೆ .ಒಂದು ಯಕ್ಷಗಾನದ ಪ್ರದರ್ಶನಕ್ಕೆ ಬೇಕಾದ ಪರಿಧಿಯನ್ನು ಕಟ್ಟಿಕೊಡುವ ಪ್ರಸಂಗ ಸಾಹಿತ್ಯವಾದರೆ ಮತ್ತೊಂದು ಪ್ರದರ್ಶನಗಳಲ್ಲಿ ಪ್ರಸಂಗದ ಸಾಹಿತ್ಯದ ಆಶಯಗಳನ್ನು ಮೌಖಿಕವಾಗಿ ಸಂಭಾಷಣೆಗಳ ಮೂಲಕವಾಗಿ ಅದನ್ನು ಸೃಜನಾತ್ಮಕವಾಗಿ ವಿನ್ಯಾಸಗೊಳಿಸುವ ವಿಧಾನ. ಈ ಎರಡು ಕೂಡ ಅಚ್ಚಗನ್ನಡದಲ್ಲಿಯೇ ಪ್ರತಿಪಾದಿಸುವುದಿಸುವುದು ವೈಶಿಷ್ಟತೆಯನ್ನು ಪಡೆಯುತ್ತದೆ. ಜೊತೆಗೆ ಇಲ್ಲಿ ಕನ್ನಡ ಸಾಹಿತ್ಯವನ್ನು ಅತ್ಯಂತ ಉತ್ಕೃಷ್ಟವಾಗಿ ವಿಶದವಾಗಿ ಬಳಸುವುದನ್ನು ಗಮನಿಸಬೇಕಾಗಿದೆ. ಕೇವಲ ಇದು ಮನೋರಂಜನೆಗೆ ಇರುವ ಕಲಾ ಮಾಧ್ಯಮಾವಾಗದೆ ಮನೋವಿಕಾಸದ ವಿಚಾರ ಪ್ರಚೋದಕವಾಗಿ ತನ್ನನ್ನು ಗುರುತಿಸಿಕೊಳ್ಳುತ್ತದೆ. ಸಮಾಜದ ಒಳಿತಿಗಾಗಿ ಪೌರಾಣಿಕ ನೆಲೆಯಲ್ಲಿ ಭಾರತೀಯ ತತ್ವಶಾಸ್ತ್ರದ ತಳಹದಿಯ ವಿಚಾರಗಳನ್ನು ಅತ್ಯಂತ ಪರಿಣಾಮಕಾರಿಯಾಗಿ ಮಂಡಿಸುವ ಪ್ರಬಲ ದೃಶ್ಯ ಮಾಧ್ಯಮವೆಂದರೆ ಅತಿಶಯವಲ್ಲ.




ಯಕ್ಷಗಾನ ಪ್ರಸಂಗ ಸಾಹಿತ್ಯವು ಕೇವಲ ರಂಗಭೂಮಿಗೆ ಬೇಕಾದ ಪಠ್ಯವಾಗಿ ಮಾತ್ರವೆಂದು ಗುರುತಿಸುವುದಕ್ಕೆ ಸಾಧ್ಯವಿಲ್ಲ. ಅದು ತನ್ನೊಳಗೆ ಸಾಹಿತ್ಯದ ಮೌಲ್ಯಗಳನ್ನು ಹೂರಣವಾಗಿಸಿಕೊಂಡಿದೆ ಎನ್ನುವುದನ್ನು ಗಮನಿಸಬೇಕಾಗಿದೆ. ಅದು ಕನ್ನಡ ಭಾಷೆಯನ್ನು ಬಳಸಿಕೊಳ್ಳುವ ರೀತಿ, ಕೊಡುವ ರಸಾನುಭವ ಇತ್ಯಾದಿಗಳು ಬೇರೆ ಉದ್ದೇಶಿತ ಸಾಹಿತ್ಯದಂತೆ ಸಿಗದೆಯಿದ್ದರೂ ಕೂಡ, ಇದನ್ನು ವಚನ, ದಾಸ, ಜನಪದ ಸಾಹಿತ್ಯದ ಪ್ರಕಾರಗಳಂತೆ ಪ್ರತ್ಯೇಕ ಸಾಹಿತ್ಯ ಪ್ರಕಾರವಾಗಿ ನೋಡುವ ಅಗತ್ಯತೆಗಳಿವೆ. ತೀ ನಂ ಶ್ರೀಯವರ 'ಭಾರತೀಯ ಕಾವ್ಯಮೀಮಾಂಸೆ' ಎನ್ನುವ ಪುಸ್ತಕಕ್ಕೆ ಬರೆದ ಮುನ್ನುಡಿಯಲ್ಲಿ ಕುವೆಂಪುರವರು ಸಾಹಿತ್ಯ ವಿಮರ್ಶೆಯನ್ನು ಸಂಶೋಧನಾತ್ಮಕ, ವರ್ಣನಾತ್ಮಕ ಹಾಗೂ ದಾರ್ಶನಿಕವಾಗಿರಬೇಕೆಂದು ತಿಳಿಸುತ್ತಾರೆ. ಯಕ್ಷಗಾನದ ಸಾಹಿತ್ಯದ ಉದ್ದೇಶ ಕಲಾತ್ಮಕ ದೃಷ್ಟಿಕೋನವಾಗಿರುವುದರಿಂದ ಇಲ್ಲಿ ಸಂಶೋಧನಾತ್ಮಕ ಅಂಶವನ್ನು ಬಿಡಬಹುದಾಗಿದೆ. ಆದರೆ ವಿಪುಲವಾಗಿ ಉಳಿದ ಅಂಶಗಳಾದ ವರ್ಣನಾತ್ಮಕ ಹಾಗೂ ದಾರ್ಶನಿಕ ಅಂಶಗಳನ್ನು ಬಳಸಿರುವುದನ್ನು ಸಾಹಿತ್ಯ ವಲಯ ಗಮನಿಸಬೇಕಾಗಿದೆ. ಪದ್ಯಗಳು ಕೊಡುವ ಒಳನೋಟಗಳು ಅಥವಾ ಧ್ವನ್ಯರ್ಥಗಳು ಸಾಹಿತ್ಯದ ಸೌಂದರ್ಯ ಹಾಗೂ ಮೌಲ್ಯಗಳನ್ನು ಉಳಿದ ಸಾಹಿತ್ಯದಂತೆ ಗೋಚರಿಸುತ್ತದೆ. ಉದಾಹರಣೆಗೆ ಇಲ್ಲಿ ಕೆಲವು ಯಕ್ಷಗಾನ ಸಾಹಿತ್ಯದ ಪದ್ಯಗಳನ್ನು ಗಮನಿಸೋಣ

ಮಧ್ಯಮಾವತಿ ತ್ರಿವುಡೆ (ಪ್ರಸಂಗ: ರಾಮ ನಿರ್ಯಾಣ. ಕವಿ: ಹೊಸ್ತೋಟ ಮಂಜುನಾಥ ಭಾಗವತ, ರಚನೆ: 21ನೇ ಶತಮಾನ)

***ನೋವು ನಲಿವುಗಳಿಂದ ಕೂಡಿದ ।ಜೀವನವ ಕಂಡಾಯ್ತು ಮತ್ತಿ । ನ್ನಾವ ಫಲವಿದೆ ನೀತಿಯೊಂದೇ। ದೇವನೆನಿಸಿತು ಎನ್ನನು ॥ ಜಗದೊಳಿಂತು ।***



ರವಿ ಮಡೋಡಿ

ರಾಮ ನಿರ್ಯಾಣ ಪ್ರಸಂಗವು ರಾಮಾಯಣದ ಕೊನೆಯ ಭಾಗದ ಪ್ರಕರಣ. ರಾಮನ ಮಡದಿಯಾದ ಸೀತೆ ಮತ್ತೆ ಭೂಮಿಯನ್ನು ಸೇರುತ್ತಾಳೆ.ಅನುಜನಾದ ಲಕ್ಷ್ಮಣ ದೇಹಾಂತ ಶಿಕ್ಷೆಯನ್ನು ಅನುಭವಿಸುವುದಕ್ಕೆ ಸರಯೂ ನದಿಯನ್ನು ಪ್ರವೇಶಿಸುತ್ತಾನೆ. ಈಗ ಒಂದರ್ಥದಲ್ಲಿ ರಾಮ ತನ್ನವರನ್ನು ಕಳೆದುಕೊಂಡು ಒಂಟಿಯಾಗುತ್ತಾನೆ.ರಾಮ ತನ್ನ ಬದುಕನ್ನು ತಾನೇ ಮತ್ತೊಮ್ಮೆ ಪರಾಮರ್ಶಿಸಿಕೊಳ್ಳುತ್ತಾನೆ. ಇಲ್ಲಿಯವರೆಗೆ ಮಾನವನಾಗಿ ಈ ಭೂಮಿಯಲ್ಲಿ ಜನ್ಮವನ್ನು ತಳೆದೆ. ಇಲ್ಲಿ ಅನುಭವಿಸಿದ ನೋವು, ನಲಿವು, ಕಷ್ಟ, ನಷ್ಟ, ಸುಖ,ದುಃಖ, ಸಂತೋಷ ಎಲ್ಲವುಗಳು ಈ ಜೀವನದಲ್ಲಿ ತುಂಬಿತ್ತು. ಈ ಜೀವನದ ಬಗ್ಗೆ ರಾಮನಿಗೆ ಸಂತೃಪ್ತ ಭಾವವಿತ್ತು. ತಾನು ಅನುಸರಿಸಿದ ನೀತಿಯ ಮಾರ್ಗಗಳು, ತನ್ನ ರಾಮರಾಜ್ಯದ ಕನಸುಗಳು ತನ್ನನ್ನು ಈ ಭೂಮಿಯಲ್ಲಿ ಪುರುಷೋತ್ತಮನ ಸ್ಥಾನಕ್ಕೆ ಏರಿಸಿ ಒಬ್ಬ ಮಾನವನನ್ನು ಕೂಡ ದೇವನಾಗಿಸಿತು ಎಂದು ಭಾವುಕವಾಗುತ್ತಾನೆ. ಜೊತೆಗೆ ಸಂಬಂಧಗಳ ಬಗ್ಗೆ ಆಂತರಂಗಿಕ ತುಮುಲ ರಾಮನಲ್ಲಿ ಪ್ರಕಟಗೊಳ್ಳುತ್ತದೆ. ಅವನಿಗೆ ಅವತಾರದ ಕೊನೆಯ ಕಾಲದಲ್ಲಿ ಈ ಮಾನವ ಸಂಬಂಧಗಳ ಬಂಧನದಿಂದ ಮುಕ್ತವಾಗುವುದಕ್ಕೆ ಕಷ್ಟವಾಗುತ್ತದೆ ಎನ್ನುವುದನ್ನು ಕವಿ ಕಾಣುತ್ತಾನೆ. ಜೊತೆಗೆ ಕವಿಯೂ ಆಧ್ಯಾತ್ಮದ ದೃಷ್ಟಿಕೋನದ ಒಳನೋಟವನ್ನು ಈ ಪದ್ಯದಲ್ಲಿ ತಿಳಿಸುತ್ತ ಎಲ್ಲರ ಜೀವನದ ಕೊನೆಯ ಘಟ್ಟ ವೈರಾಗ್ಯವೆನ್ನುವುದನ್ನು ಸಾರುತ್ತಾನೆ. *(ಮುಂದಿನ ಸಂಚಿಕೆಯಲ್ಲಿ ಮುಂದುವರೆಯುವುದು......)*

# ಪ್ರತಿಷ್ಠಿತ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಗಾಗಿ ಲಾಬಿ ಮಾಡಬೇಕೆ??

***ಸರಕಾರಿ ನಿಯಮದ ಪ್ರಕಾರ ಈ ಪ್ರಶಸ್ತಿ ಪಡೆಯಲು ಕಲಾವಿದರಿಗೆ 60 ವರ್ಷ ಮೀರಿರಬೇಕು ಹಾಗೂ ಕಲಾವಿದರೇ ಅರ್ಜಿ ಸಲ್ಲಿಸಬೇಕು. ಈ ಕಾರಣದಿಂದಾಗಿ ತುಂಬಾ ಮಂದಿ ಕಲಾವಿದರು ತಮಗೆ 60 ವರ್ಷ ದಾಟಿದರೂ ತಾವಾಗೇ ಪ್ರಶಸ್ತಿ ನೀಡುವಂತೆ ಅಂಗಲಾಚುವ ಮನಸ್ಥಿತಿ ಇಲ್ಲದ ಕಾರಣ ತಮಗೆ ಯೋಗ್ಯತೆಯಿದ್ದರೂ ನೇಪಥ್ಯದಲ್ಲೇ ಉಳಿದರು. ನಂತರದ ವರ್ಷಗಳಲ್ಲಿ ಪ್ರಶಸ್ತಿ ಪಡೆಯಲು ವಶೀಲಿ ಹಚ್ಚಬೇಕಾದ, ಪ್ರಭಾವ ಬೀರಬೇಕಾದ, ಯಾರದ್ದೋ ಕಾಲು ಹಿಡಿಯಬೇಕಾದ ಹಂತಕ್ಕೆ ತಲುಪಿತು. ಇದರ ಪರಿಣಾಮ ಅಂದರೆ ಯೋಗ್ಯತೆ ಇದ್ದವರು ಗುರುತಿಸಲ್ಪಡದೇ ಮೂಲೆಗುಂಪಾಗಬೇಕಾಯಿತು. – ಲೇಖಕರು–*** ಎಂ. ಶಾಂತರಾಮ ಕುಡ್ವ, ಮೂಡುಬಿದಿರೆ



ಪ್ರತೀ ವರ್ಷ ಆಕ್ಟೋಬರ್ ತಿಂಗಳು ಬಂದಾಗ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪಡೆಯುವ ಬಗ್ಗೆ ಕಲಾವಿದರ ಚಟುವಟಿಕೆ ಗರಿಗೆದರುತ್ತದೆ. ಈ ಪ್ರಶಸ್ತಿ ಪಡೆಯಬೇಕು ಎಂಬ ಪ್ರಯತ್ನ ಸಾಧಕರ ಹಾಗೂ ಸಾಧಕರಲ್ಲದವರದ್ದೂ ಇದ್ದೇ ಇರುತ್ತದೆ. ಇದಕ್ಕೆ ಮುಖ್ಯ ಕಾರಣವೆಂದರೆ, ಈ "ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ" ಅಂದರೆ, ಪ್ರತಿಷ್ಠಿತ ಮನ್ನಣೆ. ಈ ಪ್ರಶಸ್ತಿ ನೀಡುವುದು ಕರ್ನಾಟಕ ಸರಕಾರವೇ, ಅದರಲ್ಲೂ, ಸ್ವತಃ ಮುಖ್ಯಮಂತ್ರಿಗಳ ಹಸ್ತದಿಂದಲೇ ಪಡೆಯುವ ಭಾಗ್ಯವೂ ಹೌದು. ಕರ್ನಾಟಕ ಸರಕಾರವು ನೀಡುವ ಅತ್ಯುಚ್ಚ ಪ್ರಶಸ್ತಿ ಎಂದರೆ "ಕರ್ನಾಟಕ ರತ್ನ"ವಾದರೆ, ಎರಡನೇ ಅತ್ಯುನ್ನತ ಪ್ರಶಸ್ತಿ "ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ". ಒಂದು ಲಕ್ಷ ರೂಪಾಯಿ ನಗದು, 20ಗ್ರಾಂ ತೂಕದ ಚಿನ್ನದ ಪದಕ, ಶಾಲು, ಸ್ಮರಣಿಕೆ, ಸಂಮಾನ ಪತ್ರ ಈ ರಾಜ್ಯೋತ್ಸವ ಪ್ರಶಸ್ತಿಯಲ್ಲಿ ಸೇರಿದೆ. (ಹಿಂದೆ ಪ್ರಶಸ್ತಿ ಸಾಧಕರಿಗೆ ನಿವೇಶನವನ್ನು ನೀಡುವ ಕ್ರಮವಿತ್ತು)

1966 ರಲ್ಲಿ ಅಂದಿನ ಮುಖ್ಯಮಂತ್ರಿಗಳಾಗಿದ್ದ ಎಸ್. ನಿಜಲಿಂಗಪ್ಪ ನೇತೃತ್ವದ ಘನ ಕರ್ನಾಟಕ ಸರಕಾರ ಈ "ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ" ನೀಡುವ ಪರಂಪರೆ ಹುಟ್ಟು ಹಾಕಿತು. ಕಲೆ, ಕ್ರೀಡೆ, ವೈದ್ಯಕೀಯ, ಚಲನಚಿತ್ರ, ಸಂಸ್ಕೃತಿ, ವಿಜ್ಞಾನ, ಸಾಹಿತ್ಯ, ಜಾನಪದ, ಸಂಗೀತ, ಸಮಾಜಸೇವೆ ಮೊದಲಾದ ವಿಭಾಗದಲ್ಲಿ ಶ್ರೇಷ್ಠ ಸಾಧನೆ ಮಾಡಿದ ಸಾಧಕರಿಗೆ ಈ ಪ್ರಶಸ್ತಿ ಎಂಬುದು ಲೆಕ್ಕಾಚಾರ. ಪ್ರಾರಂಭದಲ್ಲಿ ಈ ಪ್ರಶಸ್ತಿ "ಮೈಸೂರು ರಾಜ್ಯೋತ್ಸವ ಪ್ರಶಸ್ತಿ" ಎಂದು ಹೆಸರಾಗಿದ್ದು, ನಂತರ 1972ರಲ್ಲಿ "ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ" ಆಗಿ ಬದಲಾಯಿತು. ಸುಮಾರು 60ರಿಂದ 65 ರಷ್ಟು ಸಾಧಕರು ಪ್ರತೀವರ್ಷ ಈ ಪ್ರಶಸ್ತಿ ಪಡೆಯುತ್ತಾರೆ. ಆ ಲೆಕ್ಕಾಚಾರ ಪ್ರಕಾರ ಇಷ್ಟರ ತನಕ ಈ ಪ್ರಶಸ್ತಿ ಪಡೆದವರ ಸಂಖ್ಯೆ 2400 ದಾಟಿದೆ. ಆದರೆ, ನಮ್ಮ ಕರಾವಳಿಯ ಶ್ರೇಷ್ಠ ಕಲೆಯಾದ ಯಕ್ಷಗಾನವು ಪ್ರಾರಂಭದಲ್ಲಿ ಈ ವಿಭಾಗದಲ್ಲಿ ಪರಿಗಣಿಸಲೇ ಇಲ್ಲ ಎಂಬುದು ವಿಷಾದನೀಯ. ನಂತರ,




ಕೆರೆಮನೆ ಶಿವರಾಮ ಹೆಗಡೆ

ಕರಾವಳಿಯ ಶಾಸಕರ ಪ್ರಯತ್ನದ ಫಲಶ್ರುತಿಯೋ ಎಂಬಂತೆ 19 ವರ್ಷಗಳ ನಂತರ 1985 ರಿಂದ ಯಕ್ಷಗಾನ ಕಲೆಯನ್ನೂ ಈ ವಿಭಾಗದಲ್ಲಿ ಸೇರಿಸಿ ಯಕ್ಷಗಾನಕ್ಕೆ ಮಾನ್ಯತೆ ನೀಡಿದರು ಎಂಬುದು ಸಂತೋಷದ ವಿಷಯ. 1985 ರ ಈ ಕಾಲದಲ್ಲಿ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಯಾಗಿದ್ದವರು ಕರಾವಳಿ ತೀರದ, ಯಕ್ಷಗಾನದ ಬಗ್ಗೆ ಅಭಿಮಾನ ಹಾಗೂ ಜ್ಞಾನ ಇರುವ ರಾಮಕೃಷ್ಣ ಹೆಗ್ಗಡೆಯವರು. 1985ರಲ್ಲಿ ಬಡಗು ತಿಟ್ಟಿನ ಶ್ರೇಷ್ಠ ಯಕ್ಷಗಾನ ಕಲಾವಿದರಾದ ಕೆರೆಮನೆ ಶಿವರಾಮ ಹೆಗಡೆಯವರ ಮುಕುಟಕ್ಕೆ ಹಾಗೂ

ಯಕ್ಷಗಾನಕ್ಕೆ ಪ್ರಥಮವಾಗಿ "ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ" ದೊರಕಿತು. ನಂತರ 3 ವರ್ಷಗಳ ಕಾಲ ಪುನಃ ಯಕ್ಷಗಾನದ ಅವಗಣನೆ. 1989 ರಲ್ಲಿ ಕರ್ನಾಟಕ ರಾಜ್ಯದಲ್ಲಿ ರಾಷ್ಟ್ರಪತಿ ಆಳ್ವಿಕೆ ಇದ್ದ ಸಮಯ. ಈ ಕಾಲದಲ್ಲಿ ಶ್ರೇಷ್ಠ ಯಕ್ಷಗಾನ ಕಲಾವಿದರು ಹಾಗೂ ಯಕ್ಷಗಾನ ಅರ್ಥಧಾರಿಗಳಾದ ಮಲ್ಪೆ ಶಂಕರನಾರಾಯಣ ಸಾಮಗರು ಈ ಪ್ರಶಸ್ತಿಯನ್ನು ಪಡೆದರು. ಮೂರು ವರ್ಷ ಯಕ್ಷಗಾನವನ್ನು ಅವಗಣನೆ ಮಾಡಿದುದನ್ನು 1990 ರಲ್ಲಿ, ಎಸ್. ಬಂಗಾರಪ್ಪನವರು ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ, ಒಮ್ಮೆಲೇ ಮೂರು ಮಂದಿ ಯಕ್ಷಗಾನ ಕಲಾವಿದರಿಗೆ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ನೀಡಿ, ಲೆಕ್ಕವನ್ನು ಸರಿತೂಗಿಸಿದರು. ಆ ವರ್ಷ ಯಕ್ಷರಂಗದ ಭೀಷ್ಮ ಎನಿಸಿದ ಡಾ.ಶೇಣಿ ಗೋಪಾಲಕೃಷ್ಣ ಭಟ್, ಶ್ರೇಷ್ಠ ಭಾಗವತರಾದ, ಯಕ್ಷರಂಗದಲ್ಲಿ ಸಂಚಲನೆ ಮೂಡಿಸಿದ, ಯುವ ಭಾಗವತರಾದ, ಪ್ರಶಸ್ತಿಗೆ ಅತ್ಯಂತ ಅರ್ಹರಾದ ಜಿ.ಆರ್. ಕಾಳಿಂಗ ನಾವುಡ ಹಾಗೂ ಗೋವಿಂದ ನಾಯ್ಕರಿಗೆ ಏಕಕಾಲದಲ್ಲಿ ಈ ಪ್ರಶಸ್ತಿ ಸಂದಿತು. ನಂತರದ ವರ್ಷಗಳಲ್ಲಿ ಯಕ್ಷಗಾನ ಕಲಾವಿದರಿಗೂ ರಾಜ್ಯೋತ್ಸವ ಪ್ರಶಸ್ತಿ ಪಡೆಯುವ ಕಾಲ ಕೂಡಿಬಂತು ಎನ್ನಬಹುದು.

ಆದರೆ, ಸರಕಾರಿ ನಿಯಮದ ಪ್ರಕಾರ ಈ ಪ್ರಶಸ್ತಿ ಪಡೆಯಲು ಕಲಾವಿದರಿಗೆ 60 ವರ್ಷ ಮೀರಿರಬೇಕು ಹಾಗೂ ಕಲಾವಿದರೇ ಅರ್ಜಿ ಸಲ್ಲಿಸಬೇಕು. ಈ ಕಾರಣದಿಂದಾಗಿ ತುಂಬಾ ಮಂದಿ ಕಲಾವಿದರು ತಮಗೆ 60 ವರ್ಷ ದಾಟಿದರೂ ತಾವಾಗೇ ಪ್ರಶಸ್ತಿ ನೀಡುವಂತೆ ಅಂಗಲಾಚುವ ಮನಸ್ಥಿತಿ




ಶೇಣಿ ಗೋಪಾಲಕೃಷ್ಣ ಭಟ್

ಇಲ್ಲದ ಕಾರಣ ತಮಗೆ ಯೋಗ್ಯತೆಯಿ ನಂತರದ ವರ್ಷಗಳಲ್ಲಿ ಪ್ರಶಸ್ತಿ ಪಡೆಯಲು ವಶೀಲಿ ಹಚ್ಚಬೇಕಾದ, ಪ್ರಭಾವ ಬೀರಬೇಕಾದ, ಯಾರದ್ದೋ ಕಾಲು ಹಿಡಿಯಬೇಕಾದ ಹಂತಕ್ಕೆ ತಲುಪಿತು. ಇದರ ಪರಿಣಾಮ ಅಂದರೆ ಯೋಗ್ಯತೆ ಇದ್ದವರು ಗುರುತಿಸಲ್ಪಡದೇ ಮೂಲೆಗುಂಪಾಗಬೇಕಾಯಿತು. ಸ್ವಾಭಿಮಾನ, ಕಲೆಯ ಮೇಲಿನ ಅತ್ಯಂತ ಶ್ರದ್ಧೆ, ಪ್ರಭಾವ ಬೀರಲಾಗದ ಅಸಮರ್ಥತೆಯಿಂದಾಗಿ ನೂರಾರು ಯಕ್ಷಗಾನ ಕಲಾವಿದರು ಹಿಂದುಳಿಯಬೇಕಾದುದು ದುರಂತ. ಈ ವರ್ಷದ ಮಟ್ಟಿಗೆ ಹೇಳುವುದಾದರೆ ಈ ವರ್ಷದ "ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ"ಗೆ ಉತ್ತಮ ಆಯ್ಕೆ ಎಂದರೆ ಆರ್ಗೋಡು ಮೋಹನದಾಸ್ ಶೆಣೈಯವರು. ಆದರೆ ಇವರ ಆಯ್ಕೆಗೆ ತೊಡಕಾದುದು ಜಾತಿ ವಶೀಲಿ ಹಾಗೂ ಪ್ರಭಾವ ಬೀರಬಲ್ಲವರು ಯಾರೂ ಇಲ್ಲದಿರುವುದೇ ಆಗಿದೆ. ಉತ್ತಮ ಯಕ್ಷಗಾನ ಕಲಾವಿದರು,



ಪ್ರಸಂಗಕರ್ತರು, ಯಕ್ಷಗಾನ ಗುರುಗಳು, ಮೇಳದಲ್ಲಿ ಸಂಚಾಲಕರಾಗಿ ಗುರುತಿಸಲ್ಪಡುವ ಆರ್ಗೋಡು ಮೋಹನದಾಸ್ ಶೆಣೈಯವರಿಗೆ "ಕರ್ನಾಟಕ ರಾಜ್ಯ ಪ್ರಶಸ್ತಿ" ಪಡೆಯಲು ಹಿನ್ನಡೆಯಾದುದು ಜಾತಿ ರಾಜಕಾರಣ ಹಾಗೂ ಪ್ರಭಾವ ಬೀರಬಲ್ಲ ಪೋಷಕರು ಇಲ್ಲದಿದ್ದುದೇ ಕಾರಣ ಎಂಬುದನ್ನು ಅಲ್ಲಗಳೆಯಾಲಾದೀತೆ? ಆರ್ಗೋಡರ ಅದೆಷ್ಟೋ ಶಿಷ್ಯಂದಿರಿಗೆ "ಕರ್ನಾಟಕ ರಾಜ್ಯ ಪ್ರಶಸ್ತಿ" ದೊರಕಿರುವುದು ಸಂತೋಷದ ವಿಚಾರ. ಆದರೆ ಅವರ ಗುರುಗಳಾದ ಅರ್ಗೋಡರ ಅವಗಣನೆ ಸರಿಯೇ? 13 ಬಾರಿ ಈ ಪ್ರಶಸ್ತಿಯಿಂದ ವಂಚಿತರಾದವರು ಆರ್ಗೋಡರು. ಹಾಗೆಯೇ ತೆಂಕುತಿಟ್ಟಿನ ಪೆರುವಾಯಿ ನಾರಾಯಣ ಶೆಟ್ಟಿ, ಕೊಳ್ತಿಗೆ ನಾರಾಯಣ ಗೌಡ, ಸಿದ್ದಕಟ್ಟೆ ಪದ್ಮನಾಭ ಶೆಟ್ಟಿಗಾರ್, ಕುಂದಾಪುರ ಕುಪ್ಪ ಸಹಿತ ಅದೆಷ್ಟೋ ಹಿರಿಯ ಕಲಾವಿದರಿಗೆ ಈ "ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ" ಭಾಗ್ಯ ದೊರಕಲಿಲ್ಲ ಎಂಬುದನ್ನೂ ಉಲ್ಲೇಖಿಸಲೇಬೇಕು. (ಈ ಪಟ್ಟಿಯಲ್ಲಿ ಇನ್ನೂ ಅದೆಷ್ಟೋ ಕಲಾವಿದರು ಇದ್ದಾರೆ ಎಂಬುದನ್ನು ಗಮನಿಸಿ)




ಮಲ್ಪೆ ಶಂಕರನಾರಾಯಣ ಸಾಮಗ

"ಕರ್ನಾಟಕ ರಾಜ್ಯ ಪ್ರಶಸ್ತಿ" ಪಡೆಯಲು ಬೇಕಾದ ಅರ್ಹತೆ ಏನೆಂಬುದು ಇಂದಿಗೂ ನಿಗೂಢವೇ ಆಗಿದೆ. ಏಳು ವರ್ಷಗಳ ಹಿಂದೆ, ಸುಪ್ರಸಿದ್ಧ ಯಕ್ಷಗಾನ ಕಲಾವಿದ ಓರ್ವರಿಗೆ ಈ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ದೊರಕಿದೆ ಎಂದು ಎಲ್ಲಾ ಟಿ.ವಿ. ಮಾಧ್ಯಮಗಳಲ್ಲೂ ಪ್ರಸಾರಗೊಂಡಿತ್ತು. (ಈ ಪ್ರಶಸ್ತಿಯನ್ನು ಪಡೆಯಲು ಆ ಕಲಾವಿದರು ಖಂಡಿತವಾಗಿಯೂ ಅರ್ಹರಾಗಿದ್ದರು) ಆದರೆ, ರಾತ್ರಿ 12.00 ಘಂಟೆಯ ನಂತರ, ಅದೇ ಕಲಾವಿದರ ಹೆಸರು ಹೊಂದಿದ್ದ, ಬೇರೆ ಕ್ಷೇತ್ರದ ಕಲಾವಿದರಿಗೆ ಈ ಪ್ರಶಸ್ತಿ ನೀಡಲಾಗಿತ್ತು. ಬರುವ ವರ್ಷದಿಂದ ರಾಜ್ಯಪ್ರಶಸ್ತಿ ಪಡೆಯುವ ವಿಧಾನ ಬದಲಾಗಲಿದೆ ಎಂದು ಈಗಾಗಲೇ ಸಚಿವರು ತಿಳಿಸಿದ್ದಾರೆ. ಆಗ ಈ ಎಲ್ಲಾ ತೊಡಕುಗಳು ನಿವಾರಣೆ ಆಗಬಹುದು ಎಂದು ನಿರೀಕ್ಷಿಸಬಹುದು.


---

## ಏಳನೆ ವರ್ಷದ ಸಂಸ್ಮರಣೆ – ಯಕ್ಷ ರಂಗದ ಜ್ವಾಲೆ – ಮೋಹಕ ಸ್ತ್ರೀ ವೇಷಧಾರಿ ಅರಾಟೆ ಮಂಜುನಾಥ



**ಪ್ರೋ.ಎಸ್.ವಿ.ಉದಯ ಕುಮಾರ ಶೆಟ್ಟಿ**

ತನ್ನ ಜೀವಿತದಲ್ಲಿ ದೀರ್ಘಕಾಲ ಸಾಲಿಗ್ರಾಮ ಮೇಳವೊಂದರಲ್ಲೆ ಸೇವೆ ಸಲ್ಲಿಸಿ ಸುಮಾರು ಎಪ್ಪತ್ತುಎಂಬತ್ತರ ದಶಕದಲ್ಲಿ ಇಂದಿಗೂ ಚಿರನೂತನವಾದ ಪದ್ಮಪಾಲಿ ನಾಗಶ್ರೀ, ಕಾಂಚನಶ್ರೀ, ಶ್ರೀದೇವಿ ಬನಶಂಕರಿ, ರತಿರೇಖಾ, ಚೆಲುವೆ ಚಿತ್ರಾವತಿ, ಚೈತ್ರಪಲ್ಲವಿ, ವಸಂತಸೇನೆ ಮುಂತಾದ ಸಾಮಾಜಿಕ ಪ್ರಸಂಗಗಳಿಗೆ ಅನಿವಾರ್ಯ ಸ್ತ್ರೀ ವೇಷಧಾರಿಯಾಗಿದ್ದ ಮೋಹಕ ನಟ ಅರಾಟೆ ಮಂಜುನಾಥ ನಾಯ್ಕರು ನಮ್ಮನ್ನಗಲಿ ವರ್ಷ ಏಳು ಸಂದಿದೆ. ಬಡಗುತಿಟ್ಟು ಯಕ್ಷಗಾನದ ಸ್ತ್ರೀ ವೇಷಧಾರಿಗಳಲ್ಲಿ ಅಗ್ರಪಂಕ್ತಿಯ ಹೆಸರು ಅರಾಟೆ ಮಂಜುನಾಥನವರದ್ದು. ಯಕ್ಷಗಾನದ ಇತಿಹಾಸದಲ್ಲಿ ಕಲಾವಿದನೊಬ್ಬ ಅದರಲ್ಲೂಸ್ತ್ರೀಪಾತ್ರಧಾರಿಯೊಬ್ಬರು ಬಹುಪ್ರಸಿದ್ದಿ ಪಡೆದು ಸಮಾಜದಲ್ಲಿ ಕಲಾವಿದರ ಗಡಣದಲ್ಲಿ ರಾಜಕೀಯ ರಂಗದಲ್ಲೂ ವಿಶಿಷ್ಟ ವ್ಯಕ್ತಿತ್ವದಿಂದ ಮೇರು ಪಂಕ್ತಿಯಲ್ಲಿ ಗುರುತಿಸಿಕೊಂಡಿದ್ದು ಅಪರೂಪದ ಸಾಧನೆ. ಯಕ್ಷಲೋಕದ ಮಾಯಾಂಗನೆ, ಮಿನುಗುತಾರೆ, ಎಂದು ಅಭಿಮಾನಿಗಳಿಂದ ಕರೆಸಿಕೊಂಡ ಇವರು ಪುಂಡುವೇಷಧಾರಿಯಾಗಿ ಸ್ತ್ರೀ ವೇಷಧಾರಿಯಾಗಿ, ಮೇಳದ ಸಂಚಾಲಕನಾಗಿ, ಶ್ರೇಷ್ಟ ಸಂಘಟಕನಾಗಿ, ರಾಜ್ಯಾದ್ಯಂತ ದೂರದ ಬೆಂಗಳೂರು ಮುಂಬೈಗಳಲ್ಲಿ ತನ್ನದೇ ಆದ ಅಭಿಮಾನಿಗಳನ್ನು ಹುಟ್ಟುಹಾಕಿದವರು. ಕರ್ನಾಟಕ ರಾಜ್ಯ ಪ್ರಶಸ್ತಿ, ಶಿರಿಯಾರ ಮಂಜುನಾಯ್ಕ್ ಪ್ರಶಸ್ತಿ, ಉಡುಪಿ ಯಕ್ಷಗಾನ ಕಲಾರಂಗದ ಪ್ರಶಸ್ತಿ, ಉಡುಪಿ ಯಕ್ಷಗಾನ ಕಲಾ ಕ್ಷೇತ್ರದ ಪ್ರಶಸ್ತಿ, ಜಾನಪದ ಯಕ್ಷಗಾನ ಅಕಾಡೆಮಿ ಸದಸ್ಯತ್ವ ಸಹಿತ ಯಕ್ಷಗಾನ ಕಲಾವಿದರಲ್ಲೇ ಅತೀ ಹೆಚ್ಚು ಸನ್ಮಾನ ಪಡೆದವರಲ್ಲಿಒಬ್ಬರಾಗಿದ್ದಾರೆ. ಶ್ರೀ ಸಾಲಿಗ್ರಾಮ ಮೇಳದಲ್ಲಿ ಜಯಭೇರಿ ಪಡೆದ ಜ್ವಾಲಾ ಪ್ರಸಂಗದ ಅವರುಅಭಿನಯಿಸಿದ ಛಲದಂಕ ಹೆಣ್ಣು ಜ್ವಾಲೆಯಂತೆ ನಿಜ ಜೀವನದಲ್ಲೂ ಬದುಕಿದ ಇಂತಹ ಮಹಾನ್ ಕಲಾವಿದ ಕಳೆದ ಹತ್ತು ವರ್ಷದಿಂದ ಪಾರ್ಶ್ವ ವಾಯು ಪೀಡಿತರಾಗಿ ಮಾತನಾಡಲಾಗದೇ ನಡೆಯಲಾರದೇ ಮಂಚದಲ್ಲಿ ಒರಗಿ ಚಡಪಡಿಸುತಿದ್ದರು. ಇನ್ನೊಬ್ಬರ ಸಹಾಯವಿಲ್ಲದೇ ತನ್ನ ದೈನಂದಿನ ಕಾರ್ಯಗಳನ್ನು ಮಾಡಲಾಗದೇ ಆಕಾಶ ನೋಡುತ್ತಾ ಮೂಕ ರೋದನ ಮಾಡುತ್ತಿರುವ ಇವರು ಯಕ್ಷಗಾನ ಕಾರ್ಯಕ್ರಮವೊಂದರಲ್ಲಿ ಅವರ ನೆಚ್ಚಿನ ಪಾತ್ರವಾದ ಭೀಷ್ಮ ವಿಜಯದ ಅಂಬೆಯ ಪಾತ್ರದಲ್ಲಿ ಅಭಿನಯಿಸುತ್ತಿರುವಾಗಲೇ ಅಧಿಕ ರಕ್ತದೊತ್ತಡದಿಂದ ರಂಗದಲ್ಲಿ ಕುಸಿದವರು ಮತ್ತೆ ಮೇಲೇಳಲಿಲ್ಲ. ದೇಹದ ಒಂದು ಭಾಗ ಚೈತನ್ಯ ಕಳೆದುಕೊಂಡ ಅವರು ಮತ್ತೆ ಚೇತರಿಸಿಕೊಳ್ಳಲಿಲ್ಲ. ಮೇರು ಕಲಾವಿದರಾದ ಕೋಟ ವೈಕುಂಠ ಮತ್ತು ಕುಂಜಾಲು ರಾಮಕೃಷ್ಣರ ಜೀವಿತದ ಸಂಧ್ಯಾ ಕಾಲದಲ್ಲಿ ಜೀವನ್ಮರಣ ಹೋರಾಟ ನಡಿಸಿದವರು. ತೆಂಕು ಬಡಗುತಿಟ್ಟಿನ ಖ್ಯಾತಸ್ತ್ರೀ ವೇಷಧಾರಿಗಳಲ್ಲಿ ಒಬ್ಬರಾಗಿ ಸ್ತ್ರೀ ಪಾತ್ರಕ್ಕೆ ಹೇಳಿ ಮಾಡಿಸಿದ ರೂಪ, ಆಳಂಗ, ಸ್ವರ, ಒನಪು, ವೈಯ್ಯಾರ ಅಂಗ ಸೌಷ್ಟವ, ತೂಕದ ಮಾತು, ರಂಗಾನುಭವ, ಪ್ರಸಂಗಾನುಭವಗಳಿಂದ ಬಹುಬೇಗ ಜನಪ್ರಿಯತೆ ಪಡೆದಅರಾಟೆಯವರು ಚಿಕ್ಕ ಪ್ರಾಯದಲ್ಲೇ ಸ್ತ್ರೀ ವೇಷಧಾರಿಯಾಗಿ ಗುರುತಿಸಿಕೊಂಡರು. ಬಾಲಕಲಾವಿದನಾಗಿ ಮಂದಾರ್ತಿ ಮೇಳದಲ್ಲಿ ರೇಣುಕಾ ಮಹಾತ್ಮೆಯ ಪರಶುರಾಮನಾಗಿ ಜನಪ್ರಿಯತೆ ಗಳಿಸಿಕೊಂಡ ಅವರು ಸ್ತ್ರೀಯ ಕೋಮಲತೆ ಮಾತಿನ ಮಾಧುರ್ಯ ಭಾವದಲ್ಲಿ ಲಜ್ಜೆ ತೋರ್ಪಡಿಸುತ್ತಾ ಗಂಡೇ ಹೆಣ್ಣಾಗಿ ರಂಗಸ್ಥಳ ರಾಣಿಯಾಗಿ ಗುರುತಿಸಿಕೊಂಡರು. ಸೌಮ್ಯ ಪಾತ್ರಗಳಾದ ದಮಯಂತಿ, ಸೀತೆ, ಚಿತ್ರಾಂಗದೆ, ಸಾವಿತ್ರಿ, ತಾರೆ, ಮಂಡೋದರಿ ಸೈರಂಧ್ರಿ ಪಾತ್ರಗಳನ್ನು ಮನ ಮಿಡಿಯುವಂತೆ ಅಭಿನಯಿಸಬಲ್ಲ ಇವರ ಶಶಿಪ್ರಭೆ, ಅಂಬೆ, ಜ್ವಾಲೆ, ಕೈಕೆಯಂತಹ ದಿಟ್ಟ ಪಾತ್ರಗಳೂ ಸಹ ಅಷ್ಟೇ ಪರಿಪೂರ್ಣ. ಅವರಿಗೆ ಬಹು ಪ್ರಸಿದ್ದಿ ತಂದುಕೊಟ್ಟ ಪಾತ್ರಗಳು ಬಡಗು ತಿಟ್ಟಿನಲ್ಲಿ ಕಸೆ ವೇಷದಿಂದ ಗುರುತಿಸಲ್ಪಡುವ ಪ್ರತಾಪದ ದ್ರೌಪದಿ, ಮೀನಾಕ್ಷಿ, ಪದ್ಮಗಂಧಿ, ಪ್ರಮೀಳೆ ಮುಂತಾದ ಕಸೆ ವೇಷಗಳು.



ಅರಾಟೆ ಮಂಜುನಾಥ

ಕುಂದಾಪುರ ತಾಲೂಕಿನ ಗುಲ್ವಾಡಿ ಸಮೀಪದ ಕರ್ಕಿರಾಮ ನಾಯ್ಕ ಮತ್ತು ಮಂಜಮ್ಮ ದಂಪತಿಯ ಜೇಷ್ಠ ಪುತ್ರನಾಗಿ 1942ರಲ್ಲಿ ಜನಿಸಿದ ಅರಾಟೆಯವರು ನಾಲ್ಕನೇ ತರಗತಿವರೆಗೆ ಅಭ್ಯಾಸ ಮಾಡಿ ಮಾರಣಕಟ್ಟೆ ಮೇಳದಲ್ಲಿ ಕೋಡಂಗಿಯಾಗಿ ಗೆಜ್ಜೆ ಕಟ್ಟಿದರು. ತಾನು ಓದಲಿಲ್ಲ ಎಂಬ ನೋವಿನಲ್ಲಿ ವಿದ್ಯಾವಂತರ ಬಗ್ಗೆ ಅತೀವ ಗೌರವ ಹೊಂದಿದ ಅವರ ಬಹುಕಾಲದ ಸ್ನೇಹಿತರೂ ಕೂಡ ಸಮಾಜದ ವಿದ್ಯಾವಂತ ಸಜ್ಜನರು. ತಮ್ಮ ಮೂವರು ಮಕ್ಕಳಿಗೆ ಉನ್ನತ ಮಟ್ಟದ ವಿದ್ಯೆ ನೀಡಿ ಕಲಾವಿದರಿಗೆ ಆದರ್ಶ ಪ್ರಾಯರಾಗಿದ್ದಾರೆ. ಬಾಲ ಗೋಪಾಲ, ಪೀಠಿಕಾ ಸ್ತ್ರೀವೇಷ, ಹೀಗೆ ಹಂತ ಹಂತವಾಗಿ ಮೇಲೇರಿದ ಇವರು ಮಟಪಾಡಿ ಶ್ರೀನಿವಾಸ ನಾಯ್ಕರಲ್ಲಿ ಶಿಷ್ಯರಾಗಿ ಸೇರಿಕೊಂಡು ಹೆಜ್ಜೆಗಾರಿಕೆ ಕಲಿತರು. ಬಡಗುತಿಟ್ಟಿನಲ್ಲಿ ಆ ಕಾಲದಲ್ಲಿ ಪ್ರಬಲ ಸ್ಪರ್ಧಿಗಳಾಗಿ ಗುರುತಿಸಿಕೊಂಡ ಅರಾಟೆ ಮತ್ತು ವೈಕುಂಠ ಇವರಿಬ್ಬರು ಒಬ್ಬರಿಗೊಬ್ಬರು ಸರಿಮಿಗಿಲೆನಿಸಿಕೊಂಡಿದ್ದರು. ಅರಾಟೆಯವರು ಪ್ರಬಲ ನೃತ್ಯಗಾರರೆಂದು ಗುರುತಿಸಿಕೊಳ್ಳಲಾಗದಿದ್ದರೂ ನನ್ನ ವೀರೋಚಿತ ಅಭಿನಯ ವೇಗದ ಕುಣಿತದಿಂದ ಮದನಾಕ್ಷಿ, ಮೀನಾಕ್ಷಿ, ದ್ರೌಪದಿ ಮುಂತಾದ ವೇಷಗಳಲ್ಲಿ ಇನ್ನಿಲ್ಲದ ಯಶಸ್ಸು ಗಳಿಸಿದರು. ದಿ.ಹಾರಾಡಿ ನಾರಾಯಣ ಗಾಣಿಗ, ಕೊಕ್ಕರ್ಣೆ ನರಸಿಂಹ ಕಾಮತ್, ಕೊಳ್ಕೆಬೈಲು ಶೀನ ನಾಯ್ಕ್, ಮಾರ್ಗೋಳಿ ಗೋವಿಂದ ಸೇರೆಗಾರ್, ನೀಲಾವರ ಸುಬ್ಬಣ್ಣ ಶೆಟ್ಟಿ, ಹೇರಂಜಾಲು ವೆಂಕಟರಮಣ, ವಂಡ್ಸೆ ನಾರಾಯಣ ಗಾಣಿಗರಂತಹ ಸ್ತ್ರೀ ವೇಷಧಾರಿಗಳು ವಯೋ ಸಹಜದಿಂದ ನೇಪಥ್ಯಕ್ಕೆ ಸರಿದಾಗ ಬಡಗುತಿಟ್ಟು ರಂಗಸ್ಥಳಕ್ಕೆ ಸ್ತ್ರೀ ವೇಷದಲ್ಲಿ ಆಶಾಕಿರಣವಾದವರು ಕೋಟ ವೈಕುಂಠ ಮತ್ತುಅರಾಟೆ ಮಂಜುನಾಥ ಎಂಬ ಹೆಗ್ಗಳಿಕೆಗೆ ಪಾತ್ರವಾದವರಿವರು.

ಮಾರಣಕಟ್ಟೆ ಮೇಳದಲ್ಲಿ ಗುರು ವೀರಭದ್ರ ನಾಯಕರ ಒಡನಾಟದಲ್ಲಿ ಪರಿಪೂರ್ಣ ಸ್ತ್ರೀ ವೇಷಧಾರಿ ಯಾಗಿ ಮೂಡಿಬಂದ ಇವರ ಶ್ವೇತಕುಮಾರ ಚರಿತ್ರೆಯ ತ್ರಿಲೋಕ ಸುಂದರಿ, ಮೊಳಹಳ್ಳಿ ಹೆರಿಯನವರ ಶ್ವೇತಕುಮಾರ, ಉಡುಪಿ ಬಸವನವರ ಯಮ, ವಂಡ್ಸೆ ನಾರಾಯಣ ಗಾಣಿಗರ ಶಿವೆ ಬಹು ಖ್ಯಾತಿ ಗಳಿಸಿತ್ತು. ಬಳಿಕ ಗುರು ವೀರಭದ್ರ ನಾಯಕ್ ಮರವಂತೆ ನರಸಿಂಹದಾಸರೊಂದಿಗೆ ತೆಂಕಿನ ರಾಜರಾಜೇಶ್ವರಿ ಮೇಳದಲ್ಲಿ ಸೇವೆ ಸಲ್ಲಿಸಿದರು. ಬಳಿಕ ಕೊಲ್ಲೂರು, ಮಂದಾರ್ತಿ, ಇಡಗುಂಜಿ, ಕುಂಡಾವು, ಸುರತ್ಕಲ್, ಮೂಲ್ಕಿ ಮೇಳಗಳಲ್ಲಿ 40 ವರ್ಷ ಸೇವೆ ಸಲ್ಲಿಸಿದ್ದರು.



ಸಾಲಿಗ್ರಾಮ ಮೇಳ ಮತ್ತು ಅರಾಟೆಯವರಿಗೂ ಅವಿನಾಭಾವ ಸಂಬಂಧ. ಅವರ ದೀರ್ಘಕಾಲದ ಸೇವೆ ಶ್ರೀ ಸಾಲಿಗ್ರಾಮ ಮೇಳದಲ್ಲಿ. ಅಂದಿನ ಯಜಮಾನರಾದ ಪಳ್ಳಿ ಸೋಮನಾಥ ಹೆಗ್ಡೆಯವರ ನೆಚ್ಚಿನ ಕಲಾವಿದರಾದ ಅವರು ಮೇಳ ದೂರದ ಮುಂಬೈಗೆ ಮಳೆಗಾಲ ಪ್ರಯಾಣ ಬೆಳಸುವಲ್ಲಿ ಮುಂಚೂಣಿಯಲ್ಲಿದ್ದು ಅಲ್ಲಿನ ಸಂಚಾಲಕತ್ವವನ್ನೂ ವಹಿಸಿಕೊಂಡಿದ್ದರು. ಅರಾಟೆಯವರು ಹೊಸ ಪ್ರಸಂಗದಲ್ಲಿ ಕಾಣಿಸಿಕೊಂಡಿದ್ದು ಪ್ರಥಮವಾಗಿ ಸಾಲಿಗ್ರಾಮ ಮೇಳದಲ್ಲಿ, ನೆಲ್ಲೂರು ಮರಿಯಪ್ಪಾಚಾರ್, ಕಾಳಿಂಗ ನಾವಡರಂತ ಮೇರು ಕಲಾವಿದರಿದ್ದ ಅಂದಿನ ಸಾಲಿಗ್ರಾಮ ಮೇಳದಲ್ಲಿ ರಾಜ ನರ್ತಕಿ, ಚೈತ್ರ ಪಲ್ಲವಿ, ಮಹಾಸತಿ ಮಂಗಳಾ, ಶ್ರೀ ದೇವಿ ಬನಶಂಕರಿ, ರತಿರೇಖಾ, ಚೆಲುವೆ ಚಿತ್ರಾವತಿ, ಕಾಂಚನ ಶ್ರೀ, ಧರ್ಮ ಸಂಕ್ರಾಂತಿ ಪ್ರಸಂಗದ ಸ್ತ್ರೀ ಪಾತ್ರಗಳು ನಿತ್ಯನೂತನ. ಕಾಳಿಂಗ ನಾವುಡ ವಿರಚಿತ ಸಾವಿರಾರು ಪ್ರಯೋಗ ಕಂಡು ಹೊಸ ಪ್ರಸಂಗದಲ್ಲಿ ದಾಖಲೆ ನಿರ್ಮಿಸಿದ ನಾಗಶ್ರೀ ಪ್ರಸಂಗ ಅವರ ಗಯ್ಯಾಳಿ ಪ್ರಭಾಂಗಿಯ ಪಾತ್ರ ಅವರಿಗೆ ಅಪಾರ ಜನಮನ್ನಣೆ ಗಳಿಸಿಕೊಟ್ಟದ್ದು ಮಾತ್ರವಲ್ಲ ಅನಂತರ ಆ ಪಾತ್ರವನ್ನು ಅವರಷ್ಟು ತಾದ್ಯಾತ್ಮತೆಯಿಂದ ಅಭಿನಯಿಸುವ ಪಾತ್ರಧಾರಿಯೇ ಬರಲಿಲ್ಲವೆನ್ನಬಹುದು. ಪ್ರಭಂಗಿಯ ಪಾತ್ರವನ್ನು ಅಂದಿನ ಪ್ರಧಾನ ಕಲಾವಿದ ಜಲವಳ್ಳಿ ವೆಂಕಟೇಶರಾಯರೊಂದಿಗೆ ಅವರು ಚಿತ್ರಿಸಿದ ಪರಿ ಕಲಾ ರಸಿಕರ ಮನದಲ್ಲಿ ಅಚ್ಚೊತ್ತಿದೆ. ಯಕ್ಷರಂಗದ ಶ್ರೀಕೃಷ್ಣ ಶಿರಿಯಾರ ಮಂಜುನಾಯ್ಕರೊಂದಿಗೆ ಅವರು ಅಭಿನಯಿಸಿದ ಲೀಲಾ ಮೂರ್ತಿ ಶೀಕೃಷ್ಣ, ಜ್ವಾಲಾ ಮುಂತಾದ ಪೌರಾಣಿಕ ಪ್ರಸಂಗದ ಪಾತ್ರಗಳು ಸಹ ಅಷ್ಟೇ ಪರಿಪೂರ್ಣವಾದವುಗಳು.

ಬಡಗುತಿಟ್ಟಿನ ವಿವಿಧ ಮೇಳಗಳಲ್ಲಿ ಮೇರು ಕಲಾವಿದರಾದ ಐರೋಡಿ ಗೋವಿಂದಪ್ಪನವರ ಪ್ರತಾಪದ ಭೀಮನಿಗೆ ದ್ರೌಪದಿ, ಚಿಟ್ಟಾಣಿಯವರ ಕೀಚಕನಿಗೆ ಸೈರಂಧ್ರಿ, ಜಲವಳ್ಳಿಯವರ ಅರಗಿನಾಲಯದ ಭೀಮನಿಗೆ ಮಾಯಾ ಹಿಡಿಂಬೆ, ಕುಮ್ಟಾ ಗೋವಿಂದ ನಾಯ್ಕರ ಹನುಮಂತನಿಗೆ ಸೀತೆ, ನಗರ ಜಗನ್ನಾಥ ಶೆಟ್ಟಿಯವರ ಭೀಷ್ಮನಿಗೆ ಅಂಬೆ, ಆರ್ಗೋಡು ಮೋಹನದಾಸ ಶಣೈಯವರ ರಾಮನಿಗೆ ಸೀತೆ. ಶಿರಿಯಾರ ಮಂಜು ನಾಯ್ಕರ ಕೃಷ್ಣನಿಗೆ ಸತ್ಯಭಾಮೆ, ಬಳ್ಕೂರು ಕೃಷ್ಣಯಾಜಿ ಹಾಗೂ ತೀರ್ಥಹಳ್ಳಿ ಗೋಪಾಲಾಚಾರ್ಯರ ಅಭಿಮನ್ಯುವಿಗೆ ಸುಭದ್ರೆ, ಕೋಟ ವೈಕುಂಠ ದೇವರಾಯನಿಗೆ ಶರ್ಮಿಷ್ಟೆ. ಹೀಗೆ ಹಿರಿಯ ಕಿರಿಯ ಕಲಾವಿದರೊಂದಿಗಿನ ಅವರ ಜೋಡಿ ವೇಷ ಅಪೂರ್ವವಾದದ್ದು. ಡಾ. ಶಿವರಾಮ ಕಾರಂತರ ಯಕ್ಷಗಾನ ಬ್ಯಾಲೆಯಲ್ಲಿ ವಿದೇಶದಲ್ಲೂ ಯಕ್ಷಗಾನದ ಕಂಪನ್ನು ಹರಡಿದ ಕೀರ್ತಿ ಇವರದ್ದು. ಪತ್ನಿ ಜಲಜಾಕ್ಷಿ ಮತ್ತು ಮೂವರು ಮಕ್ಕಳು ಅರಾಟೆಯವರ ನೆನಪಿಗಾಗಿ ಪ್ರತೀ ವರ್ಷ ಕಲಾವಿದರೊಬ್ಬರನ್ನು ಗುರುತಿಸುತ್ತಿರುವುದು ಅಭಿಮಾನದ ಸಂಗತಿಯಾಗಿದೆ.

**ಗಮನಿಸಿ– ನಮ್ಮ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳ ಅನಿಸಿಕೆ ಅಭಿಪ್ರಾಯಗಳು ಲೇಖಕರದ್ದೇ ಹೊರತು, ಸಂಪಾದಕ ಮಂಡಳಿಯದ್ದಲ್ಲ. ನಿಮ್ಮ ಪ್ರತಿಕ್ರಿಯೆಯನ್ನು ಕಳುಹಿಸಬೇಕಾದ ಇ–ಮೇಲ್ – nadanoopuravandaru@gmail.com ಮೊಬೈಲ್ ಸಂಖ್ಯೆ– 9449686807 ನಮ್ಮ ವೆಬ್ ಸೈಟ್ ವಿಳಾಸ– https://nyt.1ngo.in/ – ಸಂಪಾದಕರು**

## ಧೀರ ಕಲೆಯೊಳಗೆ ಕೀರವಾಣಿಯರು – ೦೮

### *ಮಲೆನಾಡ ಮಣ್ಣಿನಲ್ಲಿ ಯಕ್ಷಗಾನವನ್ನು ಬೆಳಗಿಸಿದವರು – ಶ್ರೀಮತಿ ಟಿ.ಎನ್. ಜ್ಯೋತಿ ಕಳಸ*



ಸಾಧಿಸುವ ಛಲವಿದ್ದರೆ ಎಲ್ಲೂ ಏನನ್ನೂ ಸಾಧಿಸಿ ತೋರಿಸಬಹುದು ಎಂಬುದಕ್ಕೆ ಸಾಕ್ಷಿ ಶ್ರೀಮತಿ ಟಿ.ಎನ್. ಜ್ಯೋತಿ ಕಳಸ ಇವರು. ಹಳುವಳ್ಳಿಯಂತಹ ಸಣ್ಣ ಹಳ್ಳಿಯಲ್ಲಿ ಯಕ್ಷಗಾನವನ್ನು ಮಕ್ಕಳಿಗೆ ಹಾಗೂ ಮಹಿಳೆಯರಿಗೆ ಕಲಿಸುವ ಮೂಲಕ ಒಂದು ತಂಡವನ್ನು ಕಟ್ಟಿ, ಪ್ರದರ್ಶನಗಳನ್ನು ಏರ್ಪಡಿಸುವುದು ಸವಾಲಿನ ವಿಚಾರವೇ ಹೌದು.

1970ರ ಏಪ್ರಿಲ್ 26 ರಂದು ಕಾಟಿಪಳ್ಳ ಟಿ.ಕೃಷ್ಣರಾವ್ ಮತ್ತು ರಾಧಮ್ಮ ದಂಪತಿಗೆ ಮಗಳಾಗಿ ಜನಿಸಿದ ಇವರು ತಮ್ಮ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣವನ್ನು ಕಾಟಿಪಳ್ಳ ಹಾಗೂ ಕೃಷ್ಣಾಪುರದಲ್ಲಿಯೇ ಪೂರೈಸಿದರು. ಎಸ್.ಎಸ್.ಎಲ್.ಸಿವರೆಗಿನ ವಿದ್ಯಾಭ್ಯಾಸ ಇವರದು. ಆದರೆ ಇದ್ಯಾವುದೂ ಇವರನ್ನು ಯಕ್ಷಗಾನದಿಂದ ದೂರ ಉಳಿಯುವಂತೆ ಮಾಡಲಿಲ್ಲ. ಇವರ ತಂದೆ ಟಿ.ಕೃಷ್ಣರಾವ್ ಅವರು ಹವ್ಯಾಸಿ ಭಾಗವತರು. ತಮ್ಮ ತಂದೆಯಿಂದಲೇ ಯಕ್ಷಗಾನದ ಆಸಕ್ತಿಯನ್ನು ಬೆಳೆಸಿಕೊಂಡ ಜ್ಯೋತಿ ಅವರು, ಸುರತ್ಕಲ್ ಪರಿಸರದಲ್ಲಿ ಅನೇಕ ಮಹಿಳೆಯರಿಗೆ, ಮಕ್ಕಳಿಗೆ ಯಕ್ಷಗಾನ ಶಿಕ್ಷಣವನ್ನು ನೀಡಿ ವೇಷ ಮಾಡಿಸುತ್ತಿದ್ದ ಶ್ರೀ ಶಿವರಾಮ ಪಣಂಬೂರುಅವರಲ್ಲಿ ಯಕ್ಷಗಾನವನ್ನುಅಭ್ಯಸಿಸಿ, ವೇಷಗಾರಿಕೆಗೆ ತೊಡಗಿಸಿಕೊಳ್ಳುವಲ್ಲಿ ಅವಕಾಶ ಪಡೆದರು. ಅವರ ತಂಡದ ಸದಸ್ಯೆಯಾಗಿ ಅನೇಕ ವೇಷಗಳನ್ನು



ಮಾಡಿದರು. ತದನಂತರದಲ್ಲಿ ಶ್ರೀರಮೇಶ್ ಶೆಟ್ಟಿ ಬಾಯಾರು ಇವರಲ್ಲಿ ಹೆಚ್ಚಿನ ನಾಟ್ಯಾಭ್ಯಾಸವನ್ನು ಮಾಡಿ' ಶ್ರೀಮಹಾಗಣಪತಿ ಮಹಿಳಾ ಯಕ್ಷಗಾನ ತಂಡ ಬಾಳ, ಕಾಟಿಪಳ್ಳ' ಇದರಲ್ಲಿ 5–6 ವರ್ಷಗಳಷ್ಟು ಕಾಲ ಕಲಾವಿದೆಯಾಗಿ ರಂಗದಲ್ಲಿ ಗುರುತಿಸಿಕೊಂಡರು. 1993 ರಲ್ಲಿ ಶ್ರೀ ಟಿ.ಕೆ. ನಾರಾಯಣ ಭಟ್ ಇವರನ್ನು ಕೈ ಹಿಡಿದು ಮಲೆನಾಡಿನ ಕಳಸದ ಹಳುವಳ್ಳಿಗೆ ಬಂದ ಬಳಿಕವೂ ಇವರ ಯಕ್ಷಗಾನ ಜೀವನ ನಿಂತ ನೀರಾಗಲಿಲ್ಲ. ಅನೇಕ ಶಾಲಾ –ಕಾಲೇಜು ವಿದ್ಯಾರ್ಥಿಗಳಿಗೆ, ಆಸಕ್ತ ಮಹಿಳೆಯರಿಗೆ ಯಕ್ಷಗಾನವನ್ನು ಕಲಿಸುವುದಕ್ಕೆ ಆರಂಭಿಸಿದರು. 2005 ರಲ್ಲಿ ಹಳುವಳ್ಳಿಯ ಶ್ರೀ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ 25 ವಿದ್ಯಾರ್ಥಿಗಳಿಂದ ಆರಂಭವಾದ ಯಕ್ಷಗಾನ ನಾಟ್ಯಾಭ್ಯಾಸ, ಶ್ರೀ ಸುಬ್ರಹ್ಮಣ್ಯೇಶ್ವರ ಮಕ್ಕಳ ಯಕ್ಷಗಾನ ತಂಡವೆಂಬ ಹೆಸರಿನಿಂದ ಅನೇಕ ಕಡೆ ಯಕ್ಷಗಾನ ಪ್ರದರ್ಶನಗಳನ್ನು ಅನೇಕ ಕಡೆಗಳಲ್ಲಿ ಕೊಡುವಷ್ಟರ ಮಟ್ಟಿಗೆ ಬೆಳೆದು ನಿಂತಿತು. ಸುಮಾರು 4–5 ವರುಷಗಳ ಬಳಿಕ "ಶ್ರೀ ಕುಮಾರ ಸಾಂಸ್ಕೃತಿಕ ಪ್ರತಿಷ್ಠಾನ(ರಿ) ಎಂಬ ಹೆಸರಿನಿಂದ ಮಕ್ಕಳ ಜೊತೆ ಆಸಕ್ತ ಮಹಿಳೆಯರನ್ನೂ ಸೇರಿಸಿಕೊಂಡು ಪ್ರದರ್ಶನಗಳನ್ನು ನೀಡಿ ಜನಮೆಚ್ಚುಗೆ ಪಡೆದರು. ಇವತ್ತಿಗೆ ಅನೇಕ ಪೌರಾಣಿಕ ಪ್ರಸಂಗಗಳನ್ನು ಲೀಲಾಜಾಲವಾಗಿ ಪ್ರದರ್ಶಿಸುವಲ್ಲಿ ಈ ತಂಡ ಸಮರ್ಥವೆನಿಸಿದೆ. ಕರ್ನಾಟಕದಲ್ಲಿ ಮಾತ್ರವಲ್ಲದೇ ಕೇರಳ, ದೆಹಲಿಯಂತಹ ರಾಜ್ಯಗಳಲ್ಲೂ ಯಕ್ಷಗಾನ ಪ್ರದರ್ಶನಗಳನ್ನು ನೀಡಿದ ಹೆಮ್ಮೆ ಇವರದು. ಸ್ವಂತ ವೇಷಭೂಷಣದ ವ್ಯವಸ್ಥೆಯನ್ನೂ ಮಾಡಿಕೊಂಡು ಮಲೆನಾಡಿನಲ್ಲಿ ತೆಂಕುತಿಟ್ಟು ಯಕ್ಷಗಾನವನ್ನು ಬೆಳೆಸಿದ ಹಿರಿಮೆ ಜ್ಯೋತಿಯವರದು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಚಿಕ್ಕಮಗಳೂರು, ಕರ್ನಾಟಕ ಯಕ್ಷಗಾನ ಬಯಲಾಟ ಅಕಾಡೆಮಿ ಹಾಗೂ ದೆಹಲಿ ಕರ್ನಾಟಕ ಸಂಘ ಮುಂತಾದ ಪ್ರತಿಷ್ಠಿತ ವೇದಿಕೆಗಳಲ್ಲಿ ಪ್ರದರ್ಶನ ನೀಡಿದ ಅನುಭವ ಇವರದು. ಯಕ್ಷಗಾನ ಸ್ಪರ್ಧೆಗಳು, ಯಕ್ಷೋತ್ಸವ, ನಾಟ್ಯವೈಭವ ಮುಂತಾದ ಹಲವಾರು ಕಾರ್ಯಕ್ರಮಗಳನ್ನು ಈ ತಂಡ ನೀಡಿದೆ. ತಂಡದ ಪಯಣ ಇಷ್ಟು ಸಾಗುವುದಕ್ಕೆ ತಂಡದ ಕಾರ್ಯದರ್ಶಿಗಳಾದ ಎಸ್.ಜೆ.ನಾಗಭೂಷಣ ಅವರ ಪಾತ್ರ ಹಿರಿದಾದ್ದು ಎನ್ನುತ್ತಾರೆ ಜ್ಯೋತಿಯವರು. ಅಷ್ಟು ಮಾತ್ರವಲ್ಲದೆ ತಂಡವು ಯಶಸ್ವೀ ಪ್ರದರ್ಶನಗಳನ್ನು ನೀಡುವುದಕ್ಕೆ ತೆಂಕುತಿಟ್ಟಿನ ಹವ್ಯಾಸಿ ಹಾಗೂ ವೃತ್ತಿಪರ ಕಲಾವಿದರ ಹಿಮ್ಮೇಳ ಸಹಕಾರ, ಊರ ಕಲಾಭಿಮಾನಿಗಳ ಪ್ರೋತ್ಸಾಹ, ಪ್ರದರ್ಶನ ನೀಡುವುದಕ್ಕೆ ಅವಕಾಶವನ್ನೊದಗಿಸಿದ ಹಲವಾರುಸಂಘ–ಸಂಸ್ಥೆಗಳು ಹಾಗೂ ತಂಡಕ್ಕೆ ಅತಿಥಿ ಕಲಾವಿದರಾಗಿ ಬರುವವರ ಸಹಕಾರದಿಂದ ಇವತ್ತಿಗೂ ಯಕ್ಷಗಾನರಂಗದಲ್ಲಿ ಈ ತಂಡವು ನೆಲೆಯೂರಿದೆ ಎಂದು ಸಹಕರಿಸಿದವರನ್ನು ಸದಾ ನೆನೆಯುವುದನ್ನು ಮರೆಯುವುದಿಲ್ಲ ಇವರು.

ವೇಷಧಾರಿಯಾಗಿ ಮಾತ್ರವಲ್ಲದೇ ಹಿಮ್ಮೇಳದಲ್ಲೂ ಆಸಕ್ತರು. ಶ್ರೀಮತಿ ಲೀಲಾವತಿ ಬೈಪಾಡಿತ್ತಾಯರಿಂದ ಭಾಗವತಿಕೆಯನ್ನು ಅಭ್ಯಸಿಸಿದವರು. ಚೆಂಡೆ – ಮದ್ದಳೆಯಲ್ಲೂ ಆಸಕ್ತರು. ವೇಷ ಕಟ್ಟುವುದರಲ್ಲೂ ನಿಪುಣರಿವರು. ಮಕ್ಕಳಿಗೆ ಕಲಿಸುತ್ತಾ ತಾನೂ ಕಲಿಯುತ್ತಾ ಬೆಳೆದವರು. ಪುಂಡುವೇಷ, ರಾಜವೇಷ, ಸ್ತ್ರೀವೇಷ, ಬಣ್ಣದ ವೇಷ ಹೀಗೆ ಎಲ್ಲಾ ರೀತಿಯ ಪಾತ್ರಗಳಲ್ಲೂ ಕಾಣಿಸಿಕೊಂಡವರು. ಶ್ರೀದೇವಿ ಮಹಾತ್ಮೆಯ ಮಹಿಷಾಸುರನ ಪಾತ್ರವನ್ನೂ ಅನೇಕ ಬಾರಿ ನಿರ್ವಹಿಸಿ ಸೈ ಎನಿಸಿಕೊಂಡವರು. ಇವರ ಯಕ್ಷಗಾನ ಪ್ರತಿಭೆಯನ್ನು ಅನೇಕ ಸಂಘ–ಸಂಸ್ಥೆಗಳು ಗುರುತಿಸಿ ಸಂಮಾನಿಸಿವೆ. ಗೌರವ ಸಹಾಯ ನಿಧಿಯೂ ದೊರಕಿದೆ. ಪರಂಪರೆಯನ್ನು ಇಷ್ಟಪಡುವ ಇವರು ಅದನ್ನು ಉಳಿಸಿ ಬೆಳೆಸುವಲ್ಲಿಯೂ ಪ್ರಯತ್ನಿಸುತ್ತಿದ್ದಾರೆ. ತನ್ನ ಮಗಳಾದ ಶ್ರೀರಕ್ಷಾ ಕೂಡ ಯಕ್ಷಗಾನ ಕ್ಷೇತ್ರದಲ್ಲಿ ತೊಡಗಿಸಿಕೊಳ್ಳುವಲ್ಲಿ ಇವರ ಶ್ರಮ ಅಪಾರ. ಇವರಿಗೆ ಇನ್ನಷ್ಟು ಅವಕಾಶಗಳು ಇವರ ಕೈಗೊದಗಲಿ, ಇವರ ತಂಡ ಎಲ್ಲೆಡೆಯೂ ಗುರುತಿಸುವಂತಾಗಲಿ ಎಂದು ಹಾರೈಸೋಣ.



**ಸಾಯಿಸುಮಾ ಎಂ. ನಾವಡ**

## ಕಾಡುವ ಪಾತ್ರ/ ಪ್ರಸಂಗ/ ಸನ್ನಿವೇಶ

ಕಲಾವಿದರ ಯಕ್ಷಾನುಭವದ ಪ್ರಮುಖ ನೆನಪು/ಘಟನೆಗಳನ್ನು ದಾಖಲೀಕರಿಸುವ ಅಂಕಣ ಇದು. ಪ್ರತೀ ಸಂಚಿಕೆಯಲ್ಲಿ ಇಬ್ಬರು ಕಲಾವಿದರ ಅನುಭವಗಳನ್ನು ಇಲ್ಲಿ ಸಾದರಪಡಿಸುತ್ತಿದ್ದೇವೆ. ಈ ತಿಂಗಳ ಸಂಚಿಕೆಯಲ್ಲಿ ಹಿರಿಯಡಕ ಮೇಳದ ಕಲಾವಿದರಾದ ***ಸಿದ್ದಕಟ್ಟೆ ಸದಾಶಿವ ಶೆಟ್ಟಿ*** ಹಾಗೂ ಮಂದಾರ್ತಿ ಮೇಳದ ಹಿರಿಯ ಕಲಾವಿದರಾದ ***ಅಜ್ರಿ ಗೋಪಾಲ ಗಾಣಿಗ*** ರವರ ಅನುಭವಗಳ ತುಣುಕು ಪ್ರಕಟವಾಗಿದೆ.

**ಕಲಾವಿದರು – ಸಿದ್ದಕಟ್ಟೆ ಸದಾಶಿವ ಶೆಟ್ಟಿ**

ತಂದೆ– ದಿ. ಕೊರಗ ಶೆಟ್ಟಿ

ತಾಯಿ – ರೇವತಿ ಶೆಟ್ಟಿ

ಧರ್ಮಪತ್ನಿ – ಆಶಾಲತ

ಮಕ್ಕಳು – ಸನ್ನಿಧಿ ಮತ್ತು ಸಾನಿಧ್ಯ ಶೆಟ್ಟಿ

ಯಕ್ಷಗಾನದಲ್ಲಿ ಒಟ್ಟು ಅನುಭವ – 35 ವರ್ಷಗಳು

ಪ್ರಸ್ತುತ ಸೇವೆ ಸಲ್ಲಿಸುತ್ತಿರುವ ಮೇಳ – ಹಿರಿಯಡಕ ಮೇಳ

ಮೆಚ್ಚಿನ ಪ್ರಸಂಗ/ಪಾತ್ರಗಳು – ಕುಶಲವ, ಬಬ್ರುವಾಹನ ಕಾಳಗ, ಕೃಷ್ಣಾರ್ಜುನ ಕಾಳಗ, ಮಾನಿಷಾದ, ಸತ್ಯ ಹರಿಶ್ಚಂದ್ರ ನಳದಮಯಂತಿ ದೇವುಪೂಂಜ ಪ್ರತಾಪ, ಕೋಟಿ ಚೆನ್ನಯ್ಯ, ಕಾಡಮಲ್ಲಿಗೆ




ಪ್ರಸ್ತುತ ಹಿರಿಯಡಕ ಮೇಳದಲ್ಲಿ ಸೇವೆ ಸಲ್ಲಿಸುತ್ತಿರುವ ಸಿದ್ದಕಟ್ಟೆ ಸದಾಶಿವ ಶೆಟ್ಟರಿಗೆ 2022–23 ರ ತಿರುಗಾಟ 55ನೇ ಯಕ್ಷ ವಸಂತ. ಇವರು ಪ್ರಸಿದ್ಧ ಕಲಾವಿದರಾಗಿದ್ದ ದಿವಂಗತ ಸಿದ್ದಕಟ್ಟೆ ವಿಶ್ವನಾಥ ಶೆಟ್ಟರ ಸಹೋದರರೂ ಹೌದು. ಬಾಲ್ಯದ ದಿನಗಳಲ್ಲೇ ಯಕ್ಷಗಾನ ನೋಡಿ ನೋಡಿ ಅದರ ಬಗ್ಗೆ ಆಸಕ್ತಿ ತಳೆದ ಸದಾಶಿವ ಶೆಟ್ಟರು ಮುಂದೆ ಯಕ್ಷಗಾನ ಕಲಾವಿದರಾಗಬೇಕೆಂದು ಬಯಸಿದ್ದರು. ಏಳನೇ ತರಗತಿಯಲ್ಲಿರುವಾಗ ಶಾಲಾ ನಾಟಕವೊಂದರಲ್ಲಿ ಏಕಲವ್ಯನ ಪಾತ್ರವನ್ನು ನಿರ್ವಹಿಸಿದ್ದ ಇವರಿಗೆ ಗುರುಗಳಿಂದ ಇವರ ಪಾತ್ರದ ಬಗ್ಗೆ ಅಪಾರ ಮೆಚ್ಚುಗೆ ಪ್ರೋತ್ಸಾಹ ದೊರಕುತ್ತದೆ. ಇವರ ಶಾಲಾ ಗುರುಗಳು ಇವರ ಪಾತ್ರವನ್ನು ನೋಡಿ 'ಮುಂದೆ ನೀನೊಬ್ಬ ಕಲಾವಿದನೇ ಆಗುತ್ತೀಯಾ.' ಎಂದು ಬೆನ್ನು ತಟ್ಟಿ ಪ್ರೋತ್ಸಾಹಿಸಿದ್ರು. ನಂತರ ತಮ್ಮ 17 ನೇ ವಯಸ್ಸಿಗೆ ಸದಾಶಿವ ಶೆಟ್ಟರು ಯಕ್ಷಗಾನವನ್ನು ವೃತ್ತಿಯಾಗಿ ಸ್ವೀಕರಿಸುತ್ತಾರೆ. ಆರಂಭಿಕ ದಿನಗಳಲ್ಲಿ ಇವರು ಬಂಗಾಡಿ ಜನಾರ್ಧನ ಗುಡಿಗಾರರಲ್ಲಿ ಯಕ್ಷಗಾನ ನಾಟ್ಯವನ್ನು ಸಂಬಂಧಿಕರಾದ ಚೆನ್ನಪ್ಪ ಶೆಟ್ಟಿಯವರಲ್ಲಿ ಮಾತುಗಾರಿಕೆ, ಹಾಗೂ ವಿವಿಧ ಪಟ್ಟುಗಳು, ಸಹೋದರ ವಿಶ್ವನಾಥ್ ಶೆಟ್ಟಿಯವರಲ್ಲಿ ಅನೇಕ ವಿಷಯಗಳನ್ನು ಕಲಿತು ಪ್ರಬುದ್ಧ ಕಲಾವಿದರಾಗಿ ಹೊರ ಹೊಮ್ಮುತ್ತಾರೆ. ಪೂಂಜ ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನದಲ್ಲಿ ಪ್ರಥಮವಾಗಿ ಗೆಜ್ಜೆ ಕಟ್ಟುತ್ತಾರೆ. ಆರಂಭದಲ್ಲೇ ಬಬ್ರುವಾಹನ ಕಾಳಗದ ಚಿತ್ರಾಂಗದೆ ಪಾತ್ರವನ್ನು ನಿರ್ವಹಿಸುವ ಮೂಲಕ ಸ್ತ್ರೀ ವೇಷಧಾರಿಯಾಗಿ ಮುಂದುವರೆದರು. ಅವರ ಯಕ್ಷ ಜೀವನದ ಬಗ್ಗೆ ಅವರ ಮಾತುಗಳು ಹೀಗಿವೆ



"ನಾನು ಯಕ್ಷಗಾನ ಸೇರುವ ಸಮಯದಲ್ಲಿ ಮನೆಯಲ್ಲಿ ಬಡತನವಿತ್ತು. ಯಕ್ಷಗಾನವನ್ನೇ ವೃತ್ತಿಯಾಗಿ ತೆಗೆದುಕೊಂಡರೆ ಕಷ್ಟ ಎಂದು ಅಣ್ಣ ಸಲಹೆ ನೀಡಿದ್ದರು. ಯಾಕೆಂದರೆ ಆಗೆಲ್ಲ ಕಲಾವಿದರ ಪರಿಸ್ಥಿತಿ ಹೇಗಿತ್ತೆಂದರೆ ಆರು ತಿಂಗಳಷ್ಟೇ ದುಡಿಮೆ. ಊರಿಂದೂರಿಗೆ ಪ್ರಯಾಣ, ಸರಿಯಾದ ವ್ಯವಸ್ಥೆಗಳಿರಲಿಲ್ಲ. ಹೀಗೆ ಕಷ್ಟಗಳಿದ್ದವು. ಆದರೆ ನಾನು ಹಠ ತೊಟ್ಟು ಇದರಲ್ಲೇ ಮುಂದುವರೆಯಬೇಕೆಂದು ಇಚ್ಛಿಸಿದೆ. ನೂತನವಾಗಿ ಪ್ರಾರಂಭವಾದ ಅಡ್ಯಂತಾರು ಮಹಾಲಿಂಗೇಶ್ವರ ಮೇಳದಲ್ಲಿ 1984–85ನೇ ಇಸವಿಯಲ್ಲಿ ಕಲಾವಿದನಾಗಿ ಸೇರ್ಪಡೆಯಾದೆ. ನಂತರ ಕರ್ನೂರು ಕೊರಗಪ್ಪ ರೈಗಳ ಮಾಲಿಕತ್ವದ ಕದ್ರಿ ಮೇಳದ ತಿರುಗಾಟ ನಡೆಸಿದೆ. ಕರ್ನಾಟಕ ಮೇಳದಲ್ಲಿ ನನಗೆ ದೊಡ್ಡ ದೊಡ್ಡ ಕಲಾವಿದರ ಜೊತೆ ಒಡನಾಟ ದೊರಕಿತು. ಮಿಜಾರು ಅಣ್ಣಪ್ಪ ಹಾಸ್ಯಗಾರರು, ದಿ. ಪುಳಿಂಚ ರಾಮ ರೈಗಳು, ಅರುವ ಕೊರಗಪ್ಪ ಶೆಟ್ಟರು, ಗುಂಪೆ ರಾಮಯ್ಯ ರೈಗಳು, ಅಳಿಕೆ ಲಕ್ಷ್ಮಣ ಶೆಟ್ರು, ಜಪ್ಪು ದಯಾನಂದ ಶೆಟ್ರು, ಕೋಳ್ಯೂರು ರಾಮಚಂದ್ರ ರಾಯರ ಒಡನಾಟದಲ್ಲಿ ಅನುಭವ ಸಂಪಾದಿಸಿಕೊಂಡೆ. ನಾನು ಹೆಚ್ಚಿನ ತಿರುಗಾಟ ಕರ್ನಾಟಕ ಮೇಳದಲ್ಲಿ ಮಾಡಿದ್ದು.

ಯಕ್ಷಗಾನದಲ್ಲಿ ನಾನು ಸಂಪಾದಿಸಿದ್ದು ಆತ್ಮತೃಪ್ತಿ. ಯಕ್ಷಗಾನದಲ್ಲಿ ಹಣವನ್ನೇ ಮಾಡಬೇಕು ಅಂದ್ರೆ ಕಷ್ಟ. ಈಗ ಕಲಾವಿದರ ಸಂಭಾವನೆ ತಕ್ಕಮಟ್ಟಿಗೆ ಚೆನ್ನಾಗಿಯೇ ಇದೆ. ನನ್ನ ಆರಂಭದ ದಿನಗಳಲ್ಲಿ ಕಡಿಮೆ ವೇತನವಿತ್ತು. ಆದರೆ ಕಲಾವಿದನಾಗಿ ರಂಗದಲ್ಲಿ ಸಿಗುವ ಅನುಭವ ಬೇರೆಯೇ. ಮನೆಯಲ್ಲಿ ಎಂಥ ಕಷ್ಟ ಇರಲಿ ಬಡತನ ಇರಲಿ, ನೋವಿರಲಿ. ಅದೆಲ್ಲವನ್ನು ನಾವು ರಂಗದಲ್ಲಿ ಮರೆಯುತ್ತೇವೆ. ಪಾತ್ರಗಳೇ ನಾವಾಗ್ತೇವೆ. ಪಾತ್ರದೊಳಗೆ ಪರಕಾಯ ಪ್ರವೇಶ ಮಾಡುವಾಗ ಬೇರೆ ವಿಚಾರಗಳನ್ನು ಮರೆತು ಹೋಗ್ತೇವೆ. ಕಲೆಯನ್ನು ದೇವಸ್ಥಾನ ಅಂದುಕೊಂಡು ಸೇವೆ ಮಾಡಿಕೊಂಡು ಬಂದಿದ್ದೇವೆ.

***ಯಕ್ಷಗಾನದಲ್ಲಿ ಆಗಿರುವ ಬದಲಾವಣೆಯ ಕುರಿತು ಅವರ ಅಭಿಪ್ರಾಯ ಹೀಗಿದೆ***

"ಯಕ್ಷಗಾನಕ್ಕೆ ಅದರದ್ದೇ ಆದ ಪರಂಪರೆ ಚೌಕಟ್ಟು ಇದೆ. ಆವಿಷ್ಕಾರವನ್ನು ನಾನು ದೂರುವುದಿಲ್ಲ. ಹೊಸ ಅವಿಷ್ಕಾರ ಬೇಕು. ಪ್ರೇಕ್ಷಕರ ಮನೋಸ್ಥಿತಿ ಹೊಸತಾದ ಹಾಗೆ ನಾವು ಬದಲಾವಣೆ ಮಾಡಿಕೊಳ್ಳಬೇಕು. ಬದಲಾವಣೆ ಮಾಡಿಕೊಳ್ಳುವಾಗ ಅದರ ಮೂಲ ಚೌಕಟ್ಟಿಗೆ ಪೆಟ್ಟಾಗಬಾರದು ಎಂದು ನನ್ನ ಅನಿಸಿಕೆ. ಬಯಲಾಟದ ಮೇಳಗಳಲ್ಲೂ ಡೇರೆ ಮೇಳದ ರೀತಿ ಸ್ಪರ್ಧೆ ಏರ್ಪಡ್ತಾ ಇದೆ. ಆದ್ರೆ ಕಲಾವಿದನಿಗೆ ಡೇರೆ ಮೇಳಗಳಲ್ಲಿ ಸಿಕ್ಕಷ್ಟು ಪ್ರೋತ್ಸಾಹ ಹಾಗೂ ಸ್ಪಂದನೆ ಬಯಲಾಟ ಮೇಳಗಳಲ್ಲಿ ಸಿಗುವುದಿಲ್ಲ. ಯಕ್ಷಗಾನದಲ್ಲಿ ಹಳೆಯ ಮಟ್ಟುಗಳು ಹೊಸ ಪ್ರೇಕ್ಷಕ ವರ್ಗಕ್ಕೆ ಹಿಡಿಸದೇ ಇರಬಹುದು. ಈಗಿನ ಪ್ರದರ್ಶನಗಳಲ್ಲಿ ನಾಟ್ಯವೇ ಅಧಿಕವಾಗಿ ಕಾಣ್ತಾ ಇದೆ, ಭಾವನೆಗೆ ಮತ್ತು ಕಥೆಗೆ ಪ್ರಾಮುಖ್ಯತೆ ಕಡಿಮೆ ಆಗಿದೆ ಎಂದೆನಿಸುತ್ತದೆ ನನಗೆ. ಯಕ್ಷಗಾನದಲ್ಲಿ ಪಾರಂಪರಿಕತೆ ಸ್ವಲ್ಪ ಕುಸಿದಿದೆ. ಆದ್ರೆ ಅದಕ್ಕೆ ಕೇವಲ ಕಲಾವಿದ ಮಾತ್ರ ಕಾರಣ ಅಲ್ಲ. ಪ್ರೇಕ್ಷಕನೂ ಕಾರಣ ಆಗಿರ್ತಾನೆ. ಪ್ರೇಕ್ಷಕ ಪ್ರೋತ್ಸಾಹಿಸದರೆ ಮಾತ್ರ ತಾನೇ ಕಲಾವಿದ ಅದಕ್ಕೆ ಸರಿಯಾಗಿ ಒಗ್ಗಿಕೊಳ್ತಾನೆ

ಯಕ್ಷಗಾನದ ಬದಲಾವಣೆಯ ಬಗ್ಗೆ ಹೇಳುವುದಾದರೆ ಕಾಲಮಿತಿಗೆ ನಾನು ಪ್ರೋತ್ಸಾಹ ಕೊಡ್ತೇನೆ. ಎಲ್ಲ ಮೇಳಗಳಲ್ಲೂ ಕಲಾಮಿತಿಯನ್ನೇ ಅನುಸರಿಸಿದರೆ ಒಳ್ಳೆಯದು. ಇದು ನಮಗೆ ಆದ ಅನುಭವ. ಯಾಕಂದ್ರೆ ರಾತ್ರಿ 12–1 ಗಂಟೆಯ ನಂತಕ ಪ್ರೇಕ್ಷಕರೇ ಇರುವುದಿಲ್ಲ. ಕಾಲಮಿತಿ ಮಾಡಿದ್ರೆ ಜನ ಇರ್ತಾರೆ. ಪ್ರೇಕ್ಷರಿಗೂ ಕೆಲಸಕ್ಕೆ ಹೋಗ್ಬೇಕು. ಹಿಂದಿನ ಕಾಲದಲ್ಲಾದರೆ ಮನರಂಜನೆಗೆ ಬೇರೆ ಮಾಧ್ಯಮಗಳು ಇರಲಿಲ್ಲ. ಯಕ್ಷಗಾನ, ದೈವದ ಕೋಲ ಮೊದಲಾದ ಕಾರ್ಯಕ್ರಮಗಳನ್ನು ರಾತ್ರಿ ಪೂರಾ ನೋಡ್ತಾ ಇದ್ರು. ಈಗ ಹಾಗಲ್ಲ ಮನೆಯಲ್ಲಿ ಸೋಫಾದಲ್ಲಿ ಮಲಗಿಕೊಂಡೇ ಆಟ ನೋಡ್ತೋದು. ಅದಕ್ಕಾಗಿ ಬದಲಾವಣೆಯನ್ನು ನಾನು ಬಯಸ್ತೇನೆ.

***ಸಾಮಾಜಿಕ ಜಾಲತಾಣಗಳ ಪ್ರಭಾವ***

ಸಾಮಾಜಿಕ ಜಾಲತಾಣಗಳಲ್ಲಿ ಲೈವ್ ಕೊಡೋದ್ರಿಂದ ಮೊಬೈಲ್ ನಲ್ಲೇ ಯಕ್ಷಗಾನ ವೀಕ್ಷಿಸುವಂತಾಗಿದೆ. ಇದರಿಂದ ಜನರು ಆಟಕ್ಕೆ ಬರುವುದಿಲ್ಲ. ಯಕ್ಷಗಾನಕ್ಕೆ ಪ್ರೇಕ್ಷಕರು ಕಡಿಮೆ ಆಗಲು ಇದೂ ಒಂದು ಕಾರಣ. ಯಕ್ಷಗಾನಕ್ಕೆ ಪ್ರೇಕ್ಷಕರು ಬಹಳ ಮುಖ್ಯ. ಪ್ರೇಕ್ಷಕರು ಯಕ್ಷಗಾನ ವೀಕ್ಷಣೆಗೆ ಬಂದರೆ ಮಾತ್ರ ಯಕ್ಷಗಾನ ಕಲೆ ಉಳಿಯಲು ಸಾಧ್ಯ.

## ಕಲಾವಿದರು – ಅಜ್ರಿ ಗೋಪಾಲ್ ಗಾಣಿಗ

ತಂದೆ– ಶ್ರೀ. ಮಂಜಯ್ಯ ಗಾಣಿಗ
ತಾಯಿ – ಶ್ರೀಮತಿ ಮುತ್ತಮ್ಮ
ಮೊದಲು ಸೇವೆ ಪ್ರಾರಂಭಿಸಿದ ಮೇಳ – ಕಮಲಶಿಲೆ ಮೇಳ, 1972ನೆ ಇಸವಿ
ಧರ್ಮಪತ್ನಿ – ಶ್ರೀಮತಿ ರೋಹಿಣಿ
ಮಕ್ಕಳು – ಪವಿತ್ರ ಪಲ್ಲವಿ, ಪಾವನ

ಪ್ರಸ್ತುತ ಮಂದಾರ್ತಿ ಶ್ರೀ ದುರ್ಗಾಪರಮೇಶ್ವರಿ ಮೇಳದಲ್ಲಿ ಎರಡನೇ ವೇಷಧಾರಿಯಾಗಿ ಸೇವೆ ಸಲ್ಲಿಸುತ್ತಿರುವ ಅಜ್ರಿ ಗೋಪಾಲ್ ಗಾಣಿಗ 5 ದಶಕಗಳ ಕಾಲ ಯಕ್ಷಯಾನ ನಡೆಸಿದ್ದಾರೆ. ಇವರು 1972–73 ರಲ್ಲಿ ಕಮಲಶಿಲೆ ಮೇಳದಲ್ಲಿ ಪ್ರಥಮವಾಗಿ ಕಲಾ ಬದುಕು ಪ್ರಾರಂಭಿದರು. ಇವರ ತಂದೆಯವರಾದ ಮಂಜಯ್ಯ ಗಾಣಿಗರೂ ತಾಳಮದ್ದಳೆ ಕೂಟಗಳಲ್ಲಿ ಅರ್ಥಗಾರಿಕೆ ಮಾಡುತ್ತಿದ್ದರು. ಹೀಗೆ ಗೋಪಾಲ ಗಾಣೀಗರಿಗೆ ರಕ್ತಗತವಾಗಿ ಯಕ್ಷಗಾನದ ಆಸಕ್ತಿ ಮೂಡುತ್ತದೆ. "ಪ್ರಾರಂಭದಲ್ಲಿ ಕೋಡಂಗಿ ವೇಷ, ಪೀಠಿಕೆ ಸ್ತ್ರೀ ವೇಷ, ಬಾಲಗೋಪಾಲ ವೇಷಗಳನ್ನು ನಿರ್ವಹಿಸುತ್ತಿದ್ದೆ. ಈಗ ಅವು ಮರೆಯಾಗಿವೆ," ಎಂದವರು ನುಡಿಯುತ್ತಾರೆ. 1974–75 ನೇ ಇಸವಿಯಲ್ಲಿ ಉಡುಪಿ ಕುಂಜಿ ಬೆಟ್ಟುವಿನ ಕಲಾಕೇಂದ್ರದಲ್ಲಿ ಯಕ್ಷಗಾನ ಹೆಜ್ಜೆಗಾರಿಕೆ ಅಭ್ಯಸಿಸುತ್ತಾರೆ. ಗುರುಗಳಾದ ವೀರಭದ್ರ ನಾಯಕ್, ನೀಲಾವರ ರಾಮಕೃಷ್ಣಯ್ಯ, ಹಿರಿಯಡಕ ಗೋಪಾಲ್ ರಾವ್, ಇವರಲ್ಲಿ ಅಜ್ರಿ ಗೋಪಾಲ ಗಾಣಿಗರವರು ಯಕ್ಷಗಾನ ಅಭ್ಯಾಸ ಮಾಡಿದರು. ನಂತರ 1976–77 ಇಡಗುಂಜಿ ಮೇಳದಲ್ಲಿ ಕಟ್ಟು ವೇಷಗಳನ್ನು ನಿರ್ವಹಿಸುತ್ತಾರೆ. 1980ನೇ ಇಸವಿಯಲ್ಲಿ ಮಂದಾರ್ತಿ ಮೇಳದಲ್ಲಿ ಸೇವೆ ಮುಂದುವರೆಸುತ್ತಾರೆ. ಅ ಸೇವೆ ಸಲ್ಲಿಸಿದ್ದಾರೆ.



ಹಿಂದಿನ ಕಾಲದ ತಿರುಗಾಟದ ಅನುಭವಗಳನ್ನು ಅವರು ನಮ್ಮೊಂದಿಗೆ ಹಂಚಿಕೊಂಡದ್ದು ಹೀಗೆ..

"ನಾನು ಯಕ್ಷಗಾನವನ್ನು ವೃತ್ತಿಯಾಗಿ ಸ್ವೀಕರಿಸದ ಕಾಲದಲ್ಲಿ ಒಂದು ಕಡೆಯಿಂದ ಮತ್ತೊಂದು ಕಡೆಗೆ ಪ್ರಯಾಣ ಬೆಳೆಸಬೇಕಾದರೆ ನಡೆದುಕೊಂಡೇ ಹೋಗಬೇಕಿತ್ತು. ಆಗಿನ ಕಾಲದಲ್ಲಿ ಮೊದಲಿಗೆ ಪ್ರಥಮವಾಗಿ ಮಂದಾರ್ತಿ ಮೇಳಕ್ಕೆ ಬಸ್ ಸೌಲಭ್ಯ ಮಾಡಲಾಯಿತು. ಆಗ ವೇಷಧಾರಿಗಳು ಮೇಕಪ್ ಮಾಡಿಕೊಳ್ಳುವುದಕ್ಕೆ ಈಗಿನಂತೆ ಆಧುನಿಕ ಕರೆಂಟ್ ವ್ಯವಸ್ಥೆ ಇರಲಿಲ್ಲ. ಗ್ಯಾಸ್ ಲೈಟ್ ನಲ್ಲಿ ಮೇಕಪ್ ಮಾಡಿಕೊಳ್ಳುತ್ತಿದ್ದೆವು. ಬಿಡಾರಕ್ಕೆ ಹೋದ ಮೇಲೆ ಮೇಳದ ಸಾಮಾನು ತಂದು ಕೊಡುವುದು, ಹಿರಿಯ ಕಲಾವಿದರ ಸೇವೆ ಮಾಡುತ್ತಾ, ಅವರಿಂದ ವಿಷಯಗಳನ್ನು ತಿಳಿದು ಕಲಿಯುತಿದ್ದೆವು. ಹಿರಿಯ ಕಲಾವಿದರು ಕುಣಿಯುವಾಗ ರಂಗದಲ್ಲಿ ನೋಡ್ತಾ ಕಲಿಯುವುದು ಹಿಂದಿನ ಕ್ರಮಗಳು. ಕಲಿಕೆಯ ಕೇಂದ್ರ ಅನ್ನುವಂಥದ್ದಿರಲಿಲ್ಲ. ಹಿರಿಯ ಕಲಾವಿದರ ಒಡನಾಟದಲ್ಲಿ ನಡೆದುಕೊಂಡು ಹೋಗುವಾಗ ಚರ್ಚೆ ಮಾಡುತ್ತಿದ್ದೆವು. ಆ ಪಾತ್ರ ನಿರ್ವಹಣೆ ಆ ರೀತಿಯಲ್ಲ, ಈ ರೀತಿ ಮಾಡಬೇಕಿತ್ತು, ಹೀಗೆ ತರಬೇತಿ ನಡೆಯುತ್ತಿತ್ತು..

ಇವತ್ತು ಯಕ್ಷಗಾನ ಕಲಿಸುವ ಕಲಿಕಾ ಕೇಂದ್ರಗಳಿಗೆ ಸಾಕಷ್ಟು ವ್ಯವಸ್ಥೆಗಳಿವೆ. ಯಕ್ಷಗಾನದಲ್ಲೂ ಸಾಕಷ್ಟು ಬದಲಾವಣೆಗಳಾಗಿವೆ. ಯಕ್ಷಗಾನದಲ್ಲಿ ಪ್ರಯೋಗಶೀಲತೆ ನಡೆಯುತ್ತಿದೆ. ಕೆಲವೊಮ್ಮೆ ಹೊಸ ಪ್ರಸಂಗಗಳಲ್ಲಿ ಅಪಸವ್ಯಗಳಾಗೋದರಿಂದ ಯಕ್ಷಗಾನದ ಮೂಲ ಸ್ವರೂಪ ಹಾಳಾಗಿದೆ. ಆದರೆ ಕೆಲವು ಕಡೆಗಳಲ್ಲಿ ಈಗಲೂ ಹಳೇ ಶೈಲಿಯ ಹಳೆಯ ಪ್ರಸಂಗಗಳನ್ನೆ ಬಯಸಿ ಮಾಡಿಸುವವರೂ ಇದ್ದಾರೆ

***ಪ್ರಶ್ನೆ – ಮಂದಾರ್ತಿಯಲ್ಲಿ ಮಳೆಗಾಲದ ಸೇವೆಯಾಟ ಪ್ರಾಂಭಿಸಿರುವುದರಿಂದ ಕಲಾವಿದರಿಗೆ ಹೇಗೆ ಅನುಕೂಲವಾಗಿದೆ?***

***ಅಜ್ರಿ ಗೋಪಾಲ ಗಾಣಿಗ:*** "ಕಲಾವಿದನಿಗೆ ಪರ್ಯಾಯ ಉದ್ಯೋಗಗಳಿಲ್ಲದೇ ಹೋದಾಗ ಮಳೆಗಾಲದ ಅವಧಿಯಲ್ಲಿ ಪ್ರದರ್ಶನಗಳಿಲ್ಲದೇ ಆರು ತಿಂಗಳು ಏನೂ ಸಂಪಾದನೆ ಇಲ್ಲ. ಈ ಸಮಯದಲ್ಲಿ ಕಲಾವಿದನಿಗೆ ಬದುಕಿನ ನಿರ್ವಹಣೆ ಕಷ್ಟ. ಆರು ತಿಂಗಳ ತಿರುಗಾಟದ ಸಂಪಾದನೆಯಲ್ಲಿ 12 ತಿಂಗಳು ಹೋಗಬೇಕು. ಸಂಸಾರ ನಡೆಸಬೇಕು ಎಂದರೆ ತುಂಬ ಕಷ್ಟ. ಮಂದಾರ್ತಿ ಮೇಳದಲ್ಲಿ ಮಳೆಗಾಲದ ಸೇವೆ ಪ್ರಾರಂಭಿಸಿರುವುದರಿಂದ ಕಲಾವಿದರಿಗೆ ತುಂಬ ಅನುಕೂಲ ಆಗಿದೆ. ಇನ್ನು ಈಗಿನ ಪರಿಸ್ಥಿತಿಯಲ್ಲಿ ಕಲಾವಿದರೂ ಯಕ್ಷಗಾನವನ್ನೊಂದೇ ನೆಚ್ಚಿಕೊಂಡಿದ್ದರೆ ಸಾಕಾಗುವುದಿಲ್ಲ. ಎಲ್ಲರೂ ಸ್ಟಾರ್ ಕಲಾವಿದರು ಆಗುವುದಿಲ್ಲ. ಪ್ರಸಿದ್ಧಿಯಲ್ಲಿರುವ ಕಲಾವಿದರಿಗೆ ಹೆಚ್ಚು ಪ್ರದರ್ಶನಗಳಲ್ಲಿ ಅವಕಾಶ ಸಿಕ್ಕಿದ್ರೆ, ನೇಪಥ್ಯ ಕಲಾವಿದರಾದರೆ ಅವಕಾಶ ಕಡಿಮೆ, ಬದುಕುವುದು ಕಷ್ಟವೇ. ಮಂದಾರ್ತಿಯಲ್ಲಿ ಮಳೆಗಾಲದಲ್ಲೂ ಸೇವೆಯಾಟದ ಪ್ರದರ್ಶನಕ್ಕೆ ಅವಕಾಶ ನೀಡಿರುವುದು ಕಲಾವಿದನ ಬದುಕಿಗೆ ಕೊಂಚ ಮಟ್ಟಿನ ಭದ್ರತೆ ಒದಗಿಸಿದೆ ಎನ್ನಬಹುದು.

***ಪ್ರಶ್ನೆ– ಮೊಬೈಲ್ ತಂತ್ರಜ್ಞಾನ ಮೊದಲಾದ ಬೆಳವಣಿಗೆಗಳಿಂದ ಕಲಾವಿದನ ಜ್ಞಾನ ಕೂಡಾ ವಿಸ್ತಾರ ಆಗಲು ಅನುಕೂಲವಾಗಿದೆಯಲ್ಲಾ?***

***ಅಜ್ರಿ ಗೋಪಾಲ ಗಾಣಿಗ:*** ಈಗ ಕಲಾವಿದರು ಮೊಬೈಲ್ ನೋಡಿ, ಬೇರೆ ಕಲಾವಿದರ ನಿರ್ವಹಣೆಯನ್ನು ಗಮನಿಸಿ ಒಂದು ಪಾತ್ರಕ್ಕೆ ಕಲಾವಿದರು ತಯಾರಾಗುತ್ತಾರೆ, ಆದರೆ ಅಂತಹಾ ನಿರ್ವಹಣೆ ಎಷ್ಟೋ ಸಲ ರಂಗಕ್ಕೆ ಪೂರಕವಾಗಿರುವುದಿಲ್ಲ.


ಎದುರಲ್ಲಿದ್ದ ಪಾತ್ರಧಾರಿಯಾಗಿದ್ದವನ ನಿರ್ವಹಣೆ ತಿಳಿದುಕೊಳ್ಳಬೇಕೆಂದರೆ ಪರಸ್ಪರ ಮಾತಾಡಿಕೊಂಡೇ ತಿಳಿದುಕೊಳ್ಬೇಕು. ಆ ಜ್ಞಾನ ಮೊಬೈಲ್ ನೀಡೋದಿಲ್ಲ. ಈ ಹಿಂದೆ ಭಾಗವತರು ಹೇಳುವ ಪದ್ಯಗಳಿಗೆ ಇಂತಿಷ್ಟೇ ಎಂಬ ಮಿತಿ ಇತ್ತು. ಈಗ 2–3 ಜನ ಭಾಗವತರು ರಂಗದಲ್ಲಿ ಎಷ್ಟು ಎಳೀತಾರೆ ಯಾವ ಶ್ರುತಿಯಲ್ಲಿ ಏರಿಸ್ತೇನೆ ಇದನ್ನು ಗಮನಿಸಿದ್ರೆ ತುಂಬ ಬೇಜಾರಾಗುತ್ತದೆ. ಒಬ್ಬ ಭಾಗವತ 5 ನಿಮಿಷದ ಭಾಮಿನಿಯನ್ನು ಎಳೀತಾ ಇದ್ರೆ ಕಲಾವಿದನಾದವನು ರಂಗದಲ್ಲಿ ಏನ್ ಮಾಡ್ಬೋದು ಅಂತ ನೀವು ಗ್ರಹಿಸಿ. ಈಗಿನವರಿಗೆ ಅದು ಹಾಗಲ್ಲಿ ಹೀಗೆ ಎಂದು ಹೇಳಿದರೆ ಈಗಿನ ಕಾಲದ ಹುಡುಗರು ಒಪ್ಪಿಕೊಳ್ಳುವುದಿಲ್ಲ. ಕೊನೆಗೆ ನಾವೇ 'ಆಯ್ತಪ್ಪಾ ನೀನು ಹೇಳಿದ ಹಾಗೇ ಮಾಡೋಣ' ಅಂತ ಹೊಂದಾಣಿಕೆ ಮಾಡಿಕೊಂಡು ಹೋಗುವುದು..

***ಪ್ರಶ್ನೆ– ಯಕ್ಷಗಾನದಿಂದ ನೀವು ಗಳಿಸಿರುವುದು ಏನು?***

***ಅಜ್ರಿ ಗೋಪಾಲ ಗಾಣಿಗ:*** "ನಾನು ಬೇರೆ ಯಾವುದೇ ಕೆಲಸದಲ್ಲಿದ್ದಿದ್ರೆ ಇಂತಹಾ ಗುರುತಿಸುವಿಕೆ ಇರುತ್ತಿರಲಿಲ್ಲ. ಇಷ್ಟೊಂದು ಅಭಿಮಾನವನ್ನು ಗಳಿಸಿಕೊಳ್ಳಲಿಕ್ಕೆ ಸಾಧ್ಯ ಇರಲಿಲ್ಲ. ಇದು ನಾನು ಹೆಮ್ಮೆ ಪಡುವಂತಹಾ ವಿಚಾರ. ಯಕ್ಷಗಾನ ಭೂಪಟದಲ್ಲಿ ನನ್ನನ್ನು ಗುರುತಿಸುವಂತೆ ಮಾಡಿದ್ದು ಈ ಕಲೆ.

ಕರ್ಣಾರ್ಜುನ ಕಾಳಗದ ಕರ್ಣ, ರತಿ ಕಲ್ಯಾಣ ಪ್ರಸಂಗದ ಕಮಲಭೂಪ, ಸುಧನ್ವಾರ್ಜುನದ ಅರ್ಜುನ, ಪ್ರಹ್ಲಾದ ಚರಿತೆಯ ಹಿರಣ್ಯ ಕಶಿಪು, ನಳ ದಮಯಂತಿ ಪ್ರಸಂಗದ ಋತು ಪರ್ಣ, ವೀರಮಣಿ ಕಾಳಗದ ವಿಭೀಷಣ ಇವರ ಮೆಚ್ಚಿನ ಪಾತ್ರಗಳು. ಅಜ್ರಿ ಗೋಪಾಲ ಗಾಣಿಗರು ನಡುಬಡಗಿನಲ್ಲಿ ಮಳಲ್ಲಿ ಹಿರೇ ನಾಯಕರು, ವಂಡಾರು ಬಸವ, ಕೋಡಿ ಶಂಕರ ಗಾಣಿಗರು, ಸ್ತ್ರೀ ವೇಷದಲ್ಲಿ ಹೇರಂಜಾಲು ಸುಬ್ಬಣ್ಣ, ಎಂಎ ನಾಯಕ್, ಹಾಸ್ಯದಲ್ಲಿ ಕುಂಜಾಲು ರಾಮಕೃಷ್ಣ, ಆರ್ಗೋಡು ಮೋಹನದಾಸ್ ಶೆಣೈ, ಉತ್ತರ ಕನ್ನಡದಲ್ಲಿ ಶಂಭು ಹೆಗಡೆ, ಮಹಾಬಲ ಹೆಗಡೆ, ಗಜಾನನ ಹೆಗಡೆ, ಹೆಬ್ಬೂರು ನಾರಾಯಣ ಭಾಗವತರು ಮೊದಲಾದವರೊಂದಿಗೆ ಆತ್ಮೀಯ ಒಡನಾಟವನ್ನು ಹೊಂದಿದ್ದರು

## ನಮ್ಮ ಲೈಬ್ರರಿ – ಚಂದ್ರಹಾಸ ಚರಿತ್ರೆ ಯಕ್ಷಗಾನ ಪ್ರಸಂಗ



ಚಂದ್ರಹಾಸ ಚರಿತ್ರೆ ಬಹಳ ಪ್ರಚಲಿತದಲ್ಲಿರುವ ಯಕ್ಷಗಾನ ಪ್ರಸಂಗ. ಹಲವು ಮೇರು ನಟರು ದುಷ್ಟಬುದ್ಧಿ ಪಾತ್ರದಲ್ಲಿ ನಟಿಸಿ ಜನಮನ ಗೆದ್ದ ಪ್ರಸಂಗ. ಈ ಪ್ರಸಂಗ ಕೃತಿಗಳ, ಅದರ ಕವಿಗಳ ಬಗ್ಗೆ ಮಾಹಿತಿ ನೀಡುವುದು ಈ ಲೇಖನದ ಉದ್ದೇಶ. ಚಂದ್ರಹಾಸ ಚರಿತ್ರೆ ಯಕ್ಷಗಾನ ಪ್ರಸಂಗ ಕೃತಿಗಳು ಲಕ್ಷ್ಮೀಶ ಕವಿಯು ಜೈಮಿನಿ ಭಾರತ ಮಹಾಕಾವ್ಯದ ಇಪ್ಪತ್ತೆಂಟು ಇಪ್ಪತ್ತೊಂಭತ್ತು ಮೂವತ್ತು ಮತ್ತು ಮೂವತ್ತೊಂದನೆಯ ಸಂಧಿಯಲ್ಲಿ ವಿವರಿಸಿದ ಚಂದ್ರಹಾಸ ದುಷ್ಟಬುದ್ಧಿಯರ ಕಥಾನಕವನ್ನು ಆದರಿಸಿ ರಚಿತವಾಗಿವೆ. ಚಂದ್ರಹಾಸ ಚರಿತ್ರೆ ಪ್ರಸಂಗವನ್ನು ಬರೆದ ಯಕ್ಷ ಕವಿಗಳು ಹಲಸಿನಹಳ್ಳಿ ನರಸಿಂಹ ಶಾಸ್ತ್ರಿ, ಸೀತಾರಾಮ ಹೆಗಡೆ ತಾರಖಂಡ, ಮಾಲೆಕೊಡ್ಲು ಶಂಭು ಗಣಪತಿ ಭಟ್, ಜಿ ಪರಮೇಶ್ವರ ಭಟ್ ಮತ್ತು ಹಿರಿಯ ಬಲಿಪ ನಾರಾಯಣ ಭಾಗವತರು. ಈ ಪ್ರಸಂಗವನ್ನು ವಿಷಯೆ ಕಲ್ಯಾಣ, ಚಂದ್ರಹಾಸೋಪಾಖ್ಯಾನ ಎಂಬ ಹೆಸರಿನಿಂದಲೂ ಗುರುತಿಸುತ್ತಾರೆ.

ಹಿರಿಯ ಯಕ್ಷಗಾನ ಕವಿ ಹಲಸಿನಹಳ್ಳಿ ನರಸಿಂಹ ಶಾಸ್ತ್ರಿಗಳು ಬರೆದ ಚಂದ್ರಹಾಸ ಚರಿತ್ರೆ ಬರೆದ ಪ್ರಸಂಗ ಪುಸ್ತಕವನ್ನು ಉಡುಪಿಯ ಶ್ರೀಮನ್ಮಧ್ವ ಸಿದ್ಧಾಂತ ಗ್ರಂಥಾಲಯಯದವರು 1953ರಲ್ಲಿ ಪ್ರಥಮವಾಗಿ ಮುದ್ರಿಸಿ ಪ್ರಕಟಿಸಿದ್ದರು. ಇದರ ಮೂರನೆಯ ಅಚ್ಚು 1969ರಲ್ಲಿ ಪ್ರಕಟವಾಗಿದೆ. ಬೆಂಗಳೂರಿನ ಯಕ್ಷವಾಹಿನಿಯವರು 495 ಪದ್ಯಗಳಿರುವ ಈ ಪ್ರಸಂಗವನ್ನು 2018 ರಲ್ಲಿ ಪರಿಷ್ಕರಿಸಿ ಅಂತರ್ಜಾಲ ಆವೃತ್ತಿಯಲ್ಲಿ ಪ್ರಕಟಿಸಿದ್ದಾರೆ. ಚಂದ್ರಹಾಸ ಚರಿತ್ರೆ ಪ್ರಸಂಗವನ್ನು ಬರೆದ ಇನ್ನೊಬ್ಬ ಕವಿ ಸೀತಾರಾಮ ಹೆಗಡೆ ತಾರಖಂಡ.ತಾರಾಖಂಡ ಸೀತಾರಾಮ ಹೆಗಡೆಯವರು ಉತ್ತರಕನ್ನಡ ಜಿಲ್ಲೆಯ ಸಿದ್ದಾಪುರ ತಾಲೂಕಿನ ಕರ್ಕಿಸವಲಿನವರು ಕವಿಯ ಕಾಲ 1884–1958. ಇದನ್ನು ತಾರಖಂಡ ಕೃತಿ–ಸ್ಮೃತಿ ಎಂಬ ಯಕ್ಷಗಾನ ಸಂಪುಟ ಪುಸ್ತಕದಲ್ಲಿ ಪ್ರಕಟಿಸಲಾಗಿದೆ. ಉತ್ತರಕನ್ನಡ ಜಿಲ್ಲೆಯ ಶಿರಾಲಿ ಸಮೀಪದ ಮಾಲೆಕೊಡ್ಲು ಶಂಭು ಗಣಪತಿ ಭಟ್ ಎನ್ನುವ ಯಕ್ಷ ಕವಿವರ್ಯರು ಕೂಡ ವಿಷಯೆ ಕಲ್ಯಾಣ ಅಥವಾ ಚಂದ್ರಹಾಸಾಖ್ಯಾನ ಎನ್ನುವ ಪ್ರಸಂಗ ರಚಿಸಿದ್ದು ಅದನ್ನು ಕವಿ ಸಹೋದರ ಪರಮೇಶ್ವರ ಗಣಪತಿ ಭಟ್ಟರು 1950ರಲ್ಲಿ ಪ್ರಕಟಿಸಿದ್ದಾರೆ. ಈ ಪ್ರಸಂಗ 356 ಪದ್ಯಗಳನ್ನೊಳಗೊಂಡಿದೆ. ಇದನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯವರು ಕೂಡ ತಮ್ಮ ಯಕ್ಷಗಾನ ಸಂಪುಟದಲ್ಲಿ ಪ್ರಕಟಿಸಿದ್ದಾರೆ. ತೆಂಕುತಿಟ್ಟಿನ ಹಿರಿಯ ಭಾಗವತ ಹಿರಿಯ ಬಲಿಪ ನಾರಾಯಣ ಭಾಗವತರೂ ಕೂಡ ಚಂದ್ರಹಾಸ ಚರಿತ್ರೆ ಪ್ರಸಂಗ ರಚಿಸಿದ್ದು ಅದನ್ನು ಮುಂಬಯಿ ಪದವೀಧರ ಯಕ್ಷಗಾನ ಸಮಿತಿಯವರು 1985ರಲ್ಲಿ ಪ್ರಕಟಿಸಿದ ಯಕ್ಷಗಾನ ಪ್ರಸಂಗಗಳು ಸಂಪುಟದಲ್ಲಿ ಪ್ರಕಟಿಸಿದ್ದಾರೆ. ಸೆಯಿಂಟ್ ಜೋನ್ ಹಾಯರ್ ಎಲಿಮೆಂಟರಿ ಶಾಲೆ ಜಪ್ಪು ಮಂಗಳೂರಿನ ಮುಖ್ಯೋಪಾದ್ಯಾಯರಾಗಿದ್ದ ಜಿ ಪರಮೇಶ್ವರ ಭಟ್ ಇವರು 357 ಪದ್ಯಗಳೊಂದಿಗೆ ಚಂದ್ರಹಾಸ ಪ್ರಸಂಗ ರಚಿಸಿದ್ದು ಮಲ್ಪೆ ಶಂಕರನಾರಾಯಣ ಸಾಮಗರ ಮುನ್ನುಡಿಯೊಂದಿಗೆ ಪ್ರಕಟವಾಗಿದೆ. ಆಸಕ್ತರಿಗೆ ಈ ಎಲ್ಲಾ ಪ್ರಸಂಗ ಸಾಹಿತ್ಯ ಅಂತರ್ಜಾಲದಲ್ಲಿ ಲಭ್ಯವಿದೆ.

ಇದಲ್ಲದೆ ಚಂದ್ರಹಾಸ ಚರಿತ್ರೆ ಯಕ್ಷಗಾನ ಪ್ರಸಂಗ ಕೃತಿಯನ್ನು ಕಿರಿಕ್ಕಾಡು ವಿಷ್ಣುಭಟ್, ಅಡೂರು ಬಳಕಿಲ ವಿಷ್ಣಯ್ಯ, ಆಲೆಟ್ಟಿ ರಾಮಣ್ಣ ಶಗ್ರಿತ್ತಾಯ, ಈಶ್ವರ ಭಟ್ ಕಿನ್ನಿಗೋಳಿ, ಜಾನಕೈ ತಿಮ್ಮಪ್ಪ ಹೆಗಡೆ, ಮೈರ್ಪಾಡಿ ವೆಂಕಟರಮಣಯ್ಯ, ಹಿತ್ತಳ್ಳಿ ಅನಂತ ಭಟ್, ವಿಷ್ಣು ಸಭಾಹಿತ ಅಗ್ರಹಾರ, ಮಟ್ಟಿ ವಾಸುದೇವ ಪ್ರಭು ಮೊದಲಾದ ಹಿರಿಯ ಕವಿಗಳು ರಚಿಸಿದ ಮಾಹಿತಿದ್ದು ಸದ್ಯ ಅವಗಳ ಪ್ರತಿಗಳು ಸಿಗುತ್ತಿಲ್ಲ

***ಲೇಖಕರು – ಉಮೇಶ ಶಿರೂರು, ಬೆಂಗಳೂರು ದೂರವಾಣಿ 9448353910***

**ವಿಶೇಷ ವ್ಯಕ್ತಿ:** ಯಕ್ಷಗಾನ ಗೊಂಬೆ ತಯಾರಿಕೆಯಲ್ಲಿ ರಾಷ್ಟ್ರ ಮಟ್ಟದಲ್ಲಿ ಹೆಸರು ಮಾಡಿರೋ ಕಲಾವಿದ ***ಕೃಷ್ಣ ಮೂರ್ತಿ ಉಪ್ಪೂರ.*** ಇವರು ಬಡಗು ತಿಟ್ಟಿನ ಪ್ರಸಿದ್ಧ ಭಾಗವತ ***ಮಾರ್ವಿ ನಾರಣಪ್ಪ ಉಪ್ಪೂರ***ರ ಪುತ್ರರು ಹಾಗೂ ಬಾಲ್ಯದಿಂದಲೇ ಯಕ್ಷಗಾನ ಹಾಗೂ ಚಿತ್ರಕಲೆಯ ಬಗ್ಗೆ ಆಸಕ್ತಿ ತಳೆದಿದ್ದರು. ಇವರು ಮೈಸೂರಿನಲ್ಲಿ ಚಿತ್ರಕಲೆ ಹಾಗೂ ಶಿಲ್ಪಕಲೆಯ ಬಗ್ಗೆ ತರಬೇತಿ ಪಡೆದಿದ್ದಾರೆ. ಉಪ್ಪೂರರು ಯಕ್ಷಗಾನದ ಕಪ್ಪು, ಕೆಂಪು, ಹಸಿರು ಕೇದಗೆ ಮುಂದಲೆ, ಮೈಂದ, ದ್ವಿವಿಧರಂತಹ ವಾನರಗಳ ಸಂಪ್ರದಾಯ ಮುಖವರ್ಣಿಕೆಯುಳ್ಳ ಕೇದಗೆ ಮುಂದಲೆ, ಕಪ್ಪು ಕೆಂಪು, ಹಸಿರು ಮುಂಡಾಸು ವೇಷಗಳು, ಗಂಧರ್ವ, ಕರ್ಣ ಪಾತ್ರದ ಮುಂಡಾಸುಗಳ ಗೊಂಬೆಗಳನ್ನು ತಯಾರಿಸುತ್ತಿದ್ದಾರೆ. ಎಲ್ಲಕ್ಕಿಂತ ಮುಖ್ಯವಾಗಿ ಇವರ ಕೌಶಲದಿಂದ ಮೂಡಿ ಬರುವ ಸೂಕ್ಷ್ಮ ರೇಖೆಗಳ, ಮುಖವರ್ಣಿಕೆಯ ಬಣ್ಣದ ರಾಕ್ಷಸ ವೇಷದ ಗೊಂಬೆಗಳು ಅತ್ಯಾಕರ್ಷಕವಾಗಿದೆ.

# ಯಕ್ಷಗಾನಕ್ಕೆ ಸಂದಿಹ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ 2022

ಈ ಬಾರಿಯ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಯನ್ನು ವಿವಿಧ ಕ್ಷೇತ್ರಗಳ 67 ಮಂದಿ ಸಾಧಕರಿಗೆ ನೀಡಲಾಗಿದ್ದು, ಅದರಲ್ಲಿ 4 ಪ್ರಶಸ್ತಿ ಯಕ್ಷಗಾನಕ್ಕೇ ಬಂದಿದೆ. ಬಹುಶಃ ಯಕ್ಷಗಾನಕ್ಕೆ ಒಮ್ಮೆಗೇ ನಾಲ್ಕು ರಾಜ್ಯೋತ್ಸವ ಪ್ರಶಸ್ತಿ ದೊರೆತದ್ದು ಇದೇ ಪ್ರಥಮ ಬಾರಿ ಇರಬಹುದು. ನಾಲ್ಕು ಮಂದಿ ಸಾಧಕರ ಸಂಕ್ಷಿಪ್ತ ಪರಿಚಯ ಹೀಗಿದೆ.



ಡಾ. ಪ್ರಭಾಕರ ಜೋಷಿ

***ಡಾ. ಪ್ರಭಾಕರ ಜೋಷಿ:*** ಡಾ.ಪ್ರಭಾಕರ ಜೋಶಿಯವರು ಯಕ್ಷಗಾನದ ಹಿರಿಯ ಅರ್ಥಧಾರಿಗಳು. ವಿಮರ್ಶಕರು, ಲೇಖಕರು, ಸಂಶೋಧಕರು, ಚಿಂತಕರು, ಯಕ್ಷಗಾನದ ಯಾವುದೇ ವಿಚಾರಗಳನ್ನು ಬಲ್ಲ ಸಂಪನ್ಮೂಲ ವ್ಯಕ್ತಿಯೂ ಹೌದು. 1946 ರಲ್ಲಿ ಕಾರ್ಕಳ ತಾಲೂಕಿನ ಮಾಳದಲ್ಲಿ ಜನಿಸಿದ 76 ವರ್ಷ ಪ್ರಾಯದ ಜೋಷಿಯವರು ಯಕ್ಷಗಾನದ ಬಗ್ಗೆ "ಇದಮಿತ್ಥಂ" ಎಂದು ಹೇಳಬಲ್ಲ ವಿದ್ವಾಂಸರೂ ಹೌದು. "ಕೃಷ್ಣ ಸಂಧಾನ" ಪ್ರಸಂಗದ ಬಗ್ಗೆ ಸಂಶೋಧನೆ ನಡೆಸಿ, ಡಾಕ್ಟರೇಟ್ ಪಡೆದಿರುವ ಜೋಷಿಯವರು, ಪಾರ್ತಿಸುಬ್ಬ ಪ್ರಶಸ್ತಿಯನ್ನೂ ಪಡೆದಿರುವ ಸಾಧಕರು. ಎಂ.ಕಾಂ ಪದವೀಧರರಾಗಿದ್ದು ಶೇಣಿ – ಸಾಮಗ ಹಾಗೂ ಇಂದಿನ ಕಾಲದ ಕಲಾವಿದರ ನಡುವಿನ ಕೊಂಡಿಯಾಗಿ ಯಕ್ಷಗಾನ ತಾಳಮದ್ದಳೆ ಕ್ಷೇತ್ರದಲ್ಲಿ ಇಂದಿಗೂ ಬೇಡಿಕೆಯ ಅರ್ಥಧಾರಿಗಳಾಗಿದ್ದಾರೆ. ಮಂಗಳೂರು ಬೆಸೆಂಟ್ ಕಾಲೇಜಿನಲ್ಲಿ ಮೂರು ದಶಕಗಳಿಗೂ ಹೆಚ್ಚು ಕಾಲ ಪ್ರಾಚಾರ್ಯರಾಗಿ, ಪ್ರಾಂಶುಪಾಲರಾಗಿ ಸೇವೆ ಸಲ್ಲಿಸಿದ್ದಾರೆ. ಕನ್ನಡ, ತುಳು, ಇಂಗ್ಲಿಷ್, ಕೊಂಕಣಿ, ಸಂಸ್ಕೃತ, ಮರಾಠಿ, ಹಿಂದಿ ಭಾಷೆಗಳನ್ನು ಬಲ್ಲ ಬಹುಶ್ರುತ ವಿದ್ವಾಂಸರು.



ಸುಬ್ರಹ್ಮಣ್ಯ ಧಾರೇಶ್ವರ

***ಎಂ.ಎ.ನಾಯ್ಕ್:*** ಮಂದರ್ತಿ ಅಣ್ಣಪ್ಪ ನಾಯ್ಕ್ ರವರು ಸಂಕ್ಷಿಪ್ತವಾಗಿ ಎಂ.ಎ.ನಾಯ್ಕ್ ಎಂದೇ ಚಿರಪರಿಚಿತರು. 70 ವರ್ಷ ಪ್ರಾಯದ ನಾಯ್ಕರು 6 ನೇ ತರಗತಿ ಮುಗಿಸಿ ತಮ್ಮ 12 ನೇ ವಯಸ್ಸಿನಲ್ಲೇ ಯಕ್ಷರಂಗ ಪ್ರವೇಶಿಸಿದರು. ಅಮೃತೇಶ್ವರಿ, ಇಡುಗುಂಜಿ, ಮೂಲ್ಕಿ, ಸಿರ್ಸಿ, ಮಂದರ್ತಿ ಮುಂತಾದ ಮೇಳದಲ್ಲಿ ನಾಲ್ಕು ದಶಕಗಳಿಗೂ ಮಿಗಿಲಾಗಿ ಸೇವೆ ಸಲ್ಲಿಸಿದ್ದಾರೆ. ಹೆಚ್ಚಾಗಿ ಸ್ತ್ರೀ ಪಾತ್ರಗಳಲ್ಲೇ ಮಿಂಚಿರುವ ನಾಯ್ಕರು ಸೀತೆ, ಚಂದ್ರಮತಿ, ಸೈರಂಧ್ರಿ, ದಮಯಂತಿ, ದ್ರೌಪದಿ, ಸುಭದ್ರೆ, ಮಂಡೋದರಿ, ತಾರೆ ಮುಂತಾದ ಪಾತ್ರಗಳಲ್ಲಿ ತುಂಬಾ ಪ್ರಸಿದ್ಧಿ ಗಳಿಸಿದ್ದಾರೆ. ಕಳೆದ 14 ವರ್ಷಗಳಿಂದ ಯಕ್ಷರಂಗದಿಂದ ನಿವೃತ್ತರಾಗಿ, ಇದೀಗ ಕೃಷಿಯಲ್ಲಿ ತೊಡಗಿಸಿಕೊಂಡಿದ್ದಾರೆ.



ಸರಪಾಡಿ ಅಶೋಕ ಶೆಟ್ಟಿ

***ಸುಬ್ರಹ್ಮಣ್ಯ ಧಾರೇಶ್ವರ:*** ಬಡಗು ತಿಟ್ಟಿನ ಸುಪ್ರಸಿದ್ಧ ಭಾಗವತರಾಗಿರುವ ಸುಬ್ರಹ್ಮಣ್ಯ ಧಾರೇಶ್ವರರು, ಅತೀ ಬೇಡಿಕೆಯ ಭಾಗವತರು. ಹವ್ಯಾಸಿ ಯಕ್ಷಗಾನ ಕಲಾವಿದರಾದ ಲಕ್ಷ್ಮೀನಾರಾಯಣ ಭಟ್ – ಲಕ್ಷ್ಮಿ ದಂಪತಿಯ ಸುಪುತ್ರರಾಗಿ ಗೋಕರ್ಣದಲ್ಲಿ ಜನಿಸಿ, ಹಂಗಾರಕಟ್ಟೆ ಯಕ್ಷಗಾನ ಕೇಂದ್ರದಲ್ಲಿ ನಾರ್ಣಪ್ಪ ಉಪ್ಪೂರರಲ್ಲಿ ಭಾಗವತಿಕೆ ಕಲಿತು, ತಮ್ಮ ಅಪ್ರತಿಮ ಕಂಠ ಮಾಧುರ್ಯ, ಸುಗಮ ಸಂಗೀತ ಶೈಲಿ ಹಾಗೂ ಸಾಂಪ್ರದಾಯಿಕ ಶೈಲಿಯೊಂದಿಗೆ ಜನಪ್ರಿಯ ಆಗಿದ್ದಾರೆ. ಸುಪ್ರಸಿದ್ಧ ಭಾಗವತರಾದ ದಿ.ಕಾಳಿಂಗ ನಾವುಡರ ಸಮಕಾಲೀನರಾಗಿ, ಸಹವರ್ತಿಯಾಗಿ, ಬಡಗು ತಿಟ್ಟಿನಲ್ಲಿ ಐದು ದಶಕಗಳಿಂದ ಭಾಗವತಿಕೆ ಕ್ಷೇತ್ರದಲ್ಲಿ ತಮ್ಮದೇ ಆದ ಛಾಪನ್ನು ಒತ್ತಿದ್ದಾರೆ. ಅಮೃತೇಶ್ವರಿ, ಸಿರ್ಸಿ, ಹಿರೇ ಮಹಾಲಿಂಗೇಶ್ವರ, ಪೆರ್ಡೂರು ಮುಂತಾದ ಮೇಳಗಳಲ್ಲಿ ಪ್ರಧಾನ ಭಾಗವತರಾಗಿ ಸೇವೆ ಸಲ್ಲಿಸಿದ್ದಾರೆ. ಭಾಗವತಿಕೆಯಲ್ಲಿ ಹಲವಾರು ಸುಧಾರಣೆ ತಂದ ಪ್ರಯೋಗಶೀಲರೂ ಹೌದು.



ಎಂ.ಎ. ನಾಯ್ಕ್

***ಸರಪಾಡಿ ಅಶೋಕ ಶೆಟ್ಟಿ:*** ಯಕ್ಷಗಾನದ ಜನಪ್ರಿಯ ಕಲಾವಿದರಾಗಿರುವ ಸರಪಾಡಿ ಅಶೋಕ ಶೆಟ್ಟಿಯವರು ಕನ್ನಡ – ತುಳು ಈ ಎರಡೂ ಯಕ್ಷಗಾನ ಪ್ರಕಾರದಲ್ಲಿ ಮಿಂಚಿದವರು. 1961 ರಲ್ಲಿ ಜನಿಸಿದ ಶೆಟ್ಟರು ಪಡ್ರೆ ಚಂದುರವರಲ್ಲಿ ಯಕ್ಷಗಾನದ ಹೆಜ್ಜೆ ಕಲಿತು ಕಳೆದ ನಾಲ್ಕು ದಶಕಗಳಿಂದ ಕಟೀಲು, ಕರ್ನಾಟಕ, ಕದ್ರಿ, ಅಳದಂಗಡಿ, ಮಂಗಳಾದೇವಿ, ಬಪ್ಪನಾಡು, ಬಾಚಕೆರೆ, ಕಾಂತಾವರ ಮುಂತಾದ ಮೇಳಗಳಲ್ಲಿ ತಿರುಗಾಟ ನಡೆಸಿ, ಪ್ರಸ್ತುತ ಸಸಿಹಿತ್ಲು ಮೇಳದ ಪ್ರಧಾನ ಕಲಾವಿದರಾಗಿದ್ದಾರೆ. ಇಂದಿಗೂ ಯಕ್ಷಗಾನ ಕ್ಷೇತ್ರದಲ್ಲಿ ಸಕ್ರಿಯರಾಗಿದ್ದಾರೆ. ಪ್ರಸಂಗಕರ್ತರಾಗಿ, ಮೇಳದ ಯಜಮಾನರಾಗಿ, ಸಂಘಟಕರಾಗಿ ಕಲಾಸೇವೆ ಮಾಡುತ್ತಾ ಇದ್ದಾರೆ. ರಾಷ್ಟ್ರೀಯ ಚಿಂತನೆಗಳ ಪ್ರತಿಪಾದಕರೂ ಹೌದು. ಹೋರಾಟ ಮನೋಭಾವದ ಶೆಟ್ಟರು ಉತ್ತಮ ಕೃಷಿಕರಾಗಿದ್ದು, ಹಲವಾರು ಸಾಂಸ್ಕೃತಿಕ ಸಂಘಗಳು, ಸಾಮಾಜಿಕ ಸಂಘಟನೆಗಳಲ್ಲಿ ಸಕ್ರಿಯರು. ಹಲವಾರು ಪ್ರಶಸ್ತಿಗಳನ್ನುಗಳಿಸಿರುವ ಶೆಟ್ಟರಿಗೆ ಈ ಸಲದ ರಾಜ್ಯೋತ್ಸವ ಪ್ರಶಸ್ತಿ, ಅವರ ಸಾಧನೆಯ ತುರಾಯಿಗೆ ದೊರಕಿದ ಇನ್ನೊಂದು ಗರಿಯಾಗಿದೆ.

ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಎಲ್ಲಾ ಕಲಾವಿದರಿಗೂ ಅಭಿನಂದನೆಗಳು.

**ಲೇಖಕರು – *ಎಂ. ಶಾಂತರಾಮ ಕುಡ್ವ, ಮೂಡುಬಿದಿರೆ***